# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಆಗಸ್ಟ್ 27, 2021

ಸಂಪುಟ : 48 ಸಂಚಿಕೆ : 105 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ಅಕ್ರಮ ಲೇಔಟ್ ನಿರ್ಮಿಸಲು ಅವಕಾಶವಿಲ್ಲ

### ದೂಡಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ದೇವರಮನಿ ಶಿವಕುಮಾರ್

ದಾವಣಗೆರೆ, ಆ.26- ದಾವಣಗೆರೆ-ಹರಿಹರ ನಗರಾಭಿವೃದ್ಧಿ ವ್ಯಾಪ್ತಿಯಲ್ಲಿ ಯಾವುದೇ ಅಕ್ರಮ ಲೇಔಟ್ ನಿರ್ಮಿಸಲು ಅವಕಾಶ ನೀಡುವುದಿಲ್ಲ ಎಂದು ದೂಡಾ ನೂತನ ಅಧ್ಯಕ್ಷ ದೇವರಮನಿ ಶಿವಕುಮಾರ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

ದೂಡಾ ಕಚೇರಿ ಸಭಾಂಗಣದಲ್ಲಿ ಇಂದು ಮಧ್ಯಾಹ್ನ ದೂಡಾ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಯಾರೂ ಕೂಡ ಅಕ್ರಮ ಲೇಔಟ್‌ಗಳನ್ನು ನಿರ್ಮಿಸಬಾರದು. ದೂಡಾಕ್ಕೆ ಅರ್ಜಿ ಸಲ್ಲಿಸಿ, ಕಾನೂನು ಪ್ರಕಾರ ಬಡಾವಣೆ ನಿರ್ಮಿಸಿ, ಅಭಿವೃದ್ಧಿ ಪಡಿಸಿದ ನಂತರವೇ ನಿವೇಶನ ಹಂಚಿಕೆ ಮಾಡುವಂತೆ ರಿಯಲ್ ಎಸ್ಟೇಟ್ ಉದ್ದಿಮೆದಾರರಲ್ಲಿ ಮನವಿ ಮಾಡಿದರು.

ದಾವಣಗೆರೆ - ಹರಿಹರ ನಗರಗಳ ವ್ಯಾಪ್ತಿಯಲ್ಲಿ ಪ್ರಾಧಿಕಾರದಿಂದ ಸುಂದರ ಬಡಾವಣೆ ನಿರ್ಮಿಸಿ, ಬಡವರಿಗೆ ಕೈಗೆಟುಕುವ ದರದಲ್ಲಿ ನಿವೇಶನ (2ನೇ ಪುಟಕ್ಕೆ)

### ಅಕ್ರಮ ಸಾಬೀತಾದರೆ ರಾಜಕೀಯ ನಿವೃತ್ತಿ

ದೂಡಾದಿಂದ ಸಕಲ ದಾಖಲೆಗಳನ್ನು ಸಲ್ಲಿಸಿ, ಲಾಟರಿ ಮೂಲಕ ನಿವೇಶನ ಪಡೆದಿದ್ದೇನೆ. ಇದು ಕಾನೂನು ಬಾಹಿರವೆಂದು ಸಾಬೀತಾದರೆ ರಾಜಕೀಯದಿಂದಲೇ ನಿವೃತ್ತಿ ಹೊಂದುತ್ತೇನೆ ಎಂದು ದೂಡಾ ನೂತನ ಅಧ್ಯಕ್ಷ ದೇವರಮನಿ ಶಿವಕುಮಾರ್ ಸ್ಪಷ್ಟಪಡಿಸಿದರು.

2011 ರಲ್ಲಿ ದೂಡಾದಿಂದ ನಿವೇಶನಕ್ಕೆ ಅರ್ಜಿ ಕರೆಯಲಾಗಿತ್ತು. ಸೂಕ್ತ ದಾಖಲೆಗಳೊಂದಿಗೆ ನಾನೂ ಕೂಡ ಅರ್ಜಿ ಸಲ್ಲಿಸಿದ್ದೆ. 2018 ರಲ್ಲಿ ನಡೆದ ಲಾಟರಿ ಮೂಲಕ ನಿವೇಶನ ಆಯ್ಕೆಯಾ ಗಿರುವ ಬಗ್ಗೆ ದೂಡಾ ಪ್ರಮಾಣ ಪತ್ರವನ್ನು ನೀಡಿದೆ. ದೂಡಾದಿಂದ ನೇರವಾಗಿ ನಿವೇಶನ ಮಂಜೂರು ಮಾಡಿಲ್ಲ. ಬಹಿರಂಗವಾಗಿ ನಡೆದ ಲಾಟರಿ ಪ್ರಕ್ರಿಯೆ ಯಲ್ಲಿ ಮಂಜೂರಾಗಿದೆ ಎಂದರು.

### ಶೀಘ್ರ ಬಾತಿ ಕೆರೆ ದೂಡಾಕ್ಕೆ ಹಸ್ತಾಂತರ: ಸಂಸದ ಸಿದ್ದೇಶ್ವರ

ಇನ್ನೂ ಒಂದು ವಾರದೊಳಗೆ ಬಾತಿ ಕೆರೆಯನ್ನು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಲಾಗುವುದು. ತನ್ಮೂಲಕ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ದೂಡಾ ಕಚೇರಿ ಸಭಾಂಗಣದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವಾಟರ್ ಪಾರ್ಕ್ ನಿರ್ಮಾಣ ಮಾಡುವ ಜೊತೆಗೆ ಬಾತಿ ಕೆರೆಯನ್ನು ಮನರಂಜನಾ ಕೇಂದ್ರವನ್ನಾಗಿ ಮಾಡಲಾಗುವುದು. ಆರು ತಿಂಗಳಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಒಳ್ಳೆಯ ಕೆಲಸ ಮಾಡಲು ಅವಕಾಶಗಳು ಸಾಕಷ್ಟಿವೆ. ಅದನ್ನು ಸರಿಯಾದ ರೀತಿ ಬಳಸಿಕೊಂಡು ಜನತೆಗೆ ಉತ್ತಮ ಅಧಿಕಾರ ನೀಡುವಂತೆ ಸಲಹೆ ನೀಡಿದರು.

ಹಿಂದಿನ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅವಧಿಯಲ್ಲೂ ಸಹ ಸುಮಾರು 60 (2ನೇ ಪುಟಕ್ಕೆ)

## ಸದ್ಯಕ್ಕೆ ಸಂಪುಟ ವಿಸ್ತರಣೆ ಇಲ್ಲ ಖಾತೆ ಬದಲಾವಣೆಯೂ ಇಲ್ಲ

ಬೆಂಗಳೂರು, ಆ. 26 - ಸದ್ಯಕ್ಕೆ ಮಂತ್ರಿಮಂಡಲ ವಿಸ್ತರಣೆಯೂ ಬೇಡ, ಖಾತೆ ಹಂಚಿಕೆಯಲ್ಲೂ ಯಾವುದೇ ಬದಲಾವಣೆ ಮಾಡುವ ಅಗತ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೇರ ಸೂಚನೆ ನೀಡಿದ್ದಾರೆ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಬಿಡಾರ ಹೂಡಿರುವ ಮುಖ್ಯಮಂತ್ರಿಯವರು, ಸಂಪುಟ ರಚನೆಯ ನಂತರ ಉಂಟಾದ ಗೊಂದಲಗಳಿಗೆ ವರಿಷ್ಠರಿಂದಲೇ ಪರಿಹಾರ ಕಂಡುಕೊಳ್ಳಲು ನಡೆಸಿದ ಯತ್ನ ಸಫಲವಾಗಿಲ್ಲ.

ಸಂಪುಟ ವಿಸ್ತರಣೆ ಹಾಗೂ ಖಾತೆ ಹಂಚಿಕೆಯಲ್ಲಿ


### ಸಿಎಂ ಬೊಮ್ಮಾಯಿಗೆ ವರಿಷ್ಠರ ಸೂಚನೆ

ಆಗಿರುವ ಗೊಂದಲ ನಿವಾರಿಸಿಕೊಳ್ಳುವ ಉದ್ದೇಶದಿಂದ ನಿನ್ನೆ ರಾತ್ರಿ ಗೃಹ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮುಖ್ಯಮಂತ್ರಿಯವರಿಗೆ ಈ ಆದೇಶ ಸಿಕ್ಕಿದೆ.

ನಮ್ಮದು ಪ್ರಾದೇಶಿಕ ಪಕ್ಷವಲ್ಲ. ಒತ್ತಡಗಳಿಗೆ ಮಣಿಯುತ್ತಾ ಹೋದರೆ, ಅದಕ್ಕೆ ಕೊನೆಯೇ ಇರುವುದಿಲ್ಲ. ಇರುವ ಅವಕಾಶವನ್ನು ಬಳಸಿಕೊಂಡು, ಉತ್ತಮ ಕೆಲಸ ಮಾಡಿ, ತಮ್ಮ ಪ್ರತಿಭೆ ತೋರಿಸಬೇಕು.

ಅದನ್ನು ಬಿಟ್ಟು ಇಂತಹದ್ದೇ ಇಲಾಖೆ ಬೇಕೆನ್ನುವುದಾದರೂ ಏತಕ್ಕೆ? ಅವರ ಉದ್ದೇಶ ವೇನು? ಅಂತಹವರನ್ನು ಮಂತ್ರಿ ಮಾಡಿರುವುದಾದರೂ ಏತಕ್ಕೆ? ಮೊದಲು ಕೊಟ್ಟ ಕೆಲಸ ಮಾಡಲಿ? ಅದು ಸಾಧ್ಯವಾಗಲಿಲ್ಲವೆಂದರೆ, ಅಧಿಕಾರ ತ್ಯಜಿಸಿ ಹೋಗಲಿ ಎಂದು ಅಮಿತ್ ಷಾ ಹೇಳಿದ್ದಾರೆ.

ಒತ್ತಡ ತಂತ್ರ ಅನುಸರಿಸುವವರಿಗೆ ಮಣೆ ಹಾಕಬೇಡಿ, ಬಿಜೆಪಿ ಇದಕ್ಕೆ ಎಂದೂ ಅವಕಾಶ ನೀಡುವುದಿಲ್ಲ. ನಿಮಗೆ ಎಲ್ಲಿಯಾದರೂ, ಕೆಲವರ ಖಾತೆ ಬದಲಾವಣೆ ಮಾಡಿ, ಒಳ್ಳೆಯ ಕೆಲಸ ತೆಗೆದುಕೊಳ್ಳಬೇಕೆನ್ನುವುದಾದರೆ ನೀವು (2ನೇ ಪುಟಕ್ಕೆ)



### ರಾಘವೇಂದ್ರ ಸ್ವಾಮಿಗಳ ಅರಾಧನಾ ಮಹೋತ್ಸವ

ಹರಿಹರ ತುಂಗಭದ್ರಾ ನದಿ ತಟದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿದ್ದ ರಾಯರ 350ನೇ ಅರಾಧನಾ ಮಹೋತ್ಸವವು ಮಹಾ ರಥೋತ್ಸವದೊಂದಿಗೆ ಸಂಪನ್ನಗೊಂಡಿತು.

### ಜಿಎಸ್‌ಟಿ ಪರಿಹಾರ : ಮೂರು ವರ್ಷ ವಿಸ್ತರಿಸಲು ಒತ್ತಾಯ

ನವದೆಹಲಿ, ಆ. 26 - ಜಿಎಸ್‌ಟಿ ಬಿಹಾರದ ಅವಧಿಯನ್ನು 2022ರ ನಂತರ ಮೂರು ವರ್ಷಗಳ ಅವಧಿಗೆ ವಿಸ್ತರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ನಂತರ ಮಾತನಾಡಿರುವ ಬೊಮ್ಮಾಯಿ, ರಾಜ್ಯಕ್ಕೆ ಪಾವತಿಸಬೇಕಿರುವ 11,000 ಕೋಟಿ ರೂ.ಗಳ ಬಾಕಿಯನ್ನು ಬಿಡುಗಡೆ ಮಾಡಲು ಚರ್ಚಿಸಿರುವುದಾಗಿ ಹೇಳಿದ್ದಾರೆ. ಜುಲೈ 2022ರ ನಂತರದಲ್ಲಿ ಪಾವತಿಸಬೇಕಿರುವ ಬಾಕಿಯನ್ನು ಈ ವರ್ಷವೇ ಕಂತುಗಳಲ್ಲಿ (2ನೇ ಪುಟಕ್ಕೆ)

## ದೂರು ಬಂದರೆ, ಬಾಲ ಬಿಚ್ಚಿದರೆ ಹುಷಾರ್ !



### 156 ರೌಡಿಶೀಟರ್ ಪರೇಡ್ ನಲ್ಲಿ ಎಸ್ಪಿ ರಿಷ್ಯಂತ್ ಖಡಕ್ ಎಚ್ಚರಿಕೆ

ದಾವಣಗೆರೆ, ಆ.26- ಲ್ಯಾಂಡ್ ಡಿಸ್‌ಪ್ಯೂಟ್ ಪಂಚಾಯ್ತಿ ಮಾಡೋದು, ಜನರಿಗೆ ಹೆದರಿಸೋದು, ಹಫ್ತಾ ವಸೂಲಿ ಮಾಡಲು ಮುಂದಾದರೆ ಯಾವುದೇ ಕಾರಣಕ್ಕೂ ಸಹಿಸಲ್ಲ. ಜನರಿಗೆ ತೊಂದರೆ ಕೊಟ್ಟ ಬಗ್ಗೆ ದೂರು ಬಂದರೆ ಸುಮ್ಮನಿರೋಲ್ಲ. ಬಾಲ ಬಿಚ್ಚಿದರೆ ಹುಷಾರ್ ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ರೌಡಿಶೀಟರ್‌ಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ನಗರದ ಹೈಸ್ಕೂಲ್ ಮೈದಾನದಲ್ಲಿ ಇಂದು ಬೆಳಿಗ್ಗೆ ನಡೆದ ರೌಡಿಶೀಟರ್‌ಗಳ ಪರೇಡ್‌ನಲ್ಲಿ ಭಾಗವಹಿಸಿದ್ದ ನಗರ ವ್ಯಾಪ್ತಿಗೆ ಸಂಬಂಧಿಸಿದ ವಿವಿಧ ಠಾಣೆಗಳಲ್ಲಿ ರೌಡಿ ಲೀಸ್ಟ್‌ನಲ್ಲಿದ್ದ 156 ರೌಡಿಶೀಟರ್‌ಗಳ ಬಳಿ ಎಸ್ಪಿ ಸಿ.ಬಿ.ರಿಷ್ಯಂತ್ ತೆರಳಿ ಒಬ್ಬೊಬ್ಬರನ್ನೇ ಪೂರ್ವಾಪರ ವಿಚಾರಣೆ ನಡೆಸಿದರು.

ಜನರನ್ನು ಹೆದರಿಸಿ ಕೆಲವರು ಪುಂಡಾಟಿಕೆ ನಡೆಸುತ್ತಿರುವುದು ಗಮನಕ್ಕೆ ಬಂದಿದೆ. ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿದರೆ ಸಹಿಸುವುದಿಲ್ಲ. ಅಮಾಯಕರಿಂದ ಹಣ ವಸೂಲಿ ಮಾಡುವುದು ಸರಿಯಲ್ಲ. ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವುದು ಕಂಡು ಬಂದರೆ, ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಎಚ್ಚರಿಸಿದರು.

ಕೆಲವರು ರೌಡಿಶೀಟರ್‌ನಲ್ಲಿ ಹೆಸರು ಇರೋದೆ ವಸೂಲಿಗೆ ಅಂತಾ ತಿಳಿದುಕೊಂಡಂತಿದೆ. ರಾಜೀ ಪಂಚಾಯಿತಿ, ಜೂಜಾಟ ನಿಲ್ಲಿಸಬೇಕು. ಜನರಿಗೆ ಅನವಶ್ಯಕವಾಗಿ ತೊಂದರೆ ಕೊಟ್ಟರೆ ಅದರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ವಾರ್ನಿಂಗ್ ಮಾಡಿದರು.

ಪ್ರತಿ ತಿಂಗಳು ರೌಡಿಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತೇವೆ. ಷರತ್ತುಬದ್ಧ (2ನೇ ಪುಟಕ್ಕೆ)

## ಕೃಷಿ ಅಭಿವೃದ್ಧಿ : ಸಿಎಂ ಚರ್ಚೆ

### ಉದ್ದು ಖರೀದಿಗೆ ಶೀಘ್ರವೇ ಆದೇಶದ ಸಾಧ್ಯತೆ

ಬೆಂಗಳೂರು, ಆ. 26 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ ಕೇಂದ್ರ ಸಚಿವರೊಂದಿಗೆ ಸಭೆ ನಡೆಸಿ, ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

ಕೇಂದ್ರ ಸಚಿವರೊಂದಿಗೆ ತಮ್ಮ ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಕೃಷಿ ಸಚಿವರೊಂದಿಗೆ ಕರ್ನಾಟಕದಲ್ಲಿ ಕೃಷಿ ಪದ್ಧತಿ ಮತ್ತು ಕೃಷಿ ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಯಿತು ಎಂದು ತಿಳಿಸಿದ್ದಾರೆ.

ಕರ್ನಾಟಕದಲ್ಲಿ 2021-22 ರ ಮುಂಗಾರು ಹಂಗಾಮಿಗೆ ಬೆಂಬಲ ಬೆಲೆ ಯೋಜನೆಯಡಿ ಉದ್ದು ಮತ್ತು ಹೆಸರು ಖರೀದಿಗೆ ಕೇಂದ್ರದ ಅನುಮತಿ ದೊರೆತಿದ್ದು, ಖರೀದಿ ಬಗ್ಗೆ ಆದೇಶ ಸದ್ಯದಲ್ಲಿಯೇ ಹೊರಬೀಳಲಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳು ಹಾಗೂ (3ನೇ ಪುಟಕ್ಕೆ)

## ಹಿರಿಯ ಪತ್ರಕರ್ತ, ರಂಗಕರ್ಮಿ ಗುಡಿಹಳ್ಳಿ ನಾಗರಾಜ್ ಇನ್ನಿಲ್ಲ



ಬೆಂಗಳೂರು, ಆ.26- ನಾಡಿನ ಹಿರಿಯ ಪತ್ರಕರ್ತರೂ ಆದ ರಂಗಕರ್ಮಿ ಗುಡಿಹಳ್ಳಿ ನಾಗರಾಜ್ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ಇಂದು ಮಧ್ಯಾಹ್ನ ನಿಧನರಾದರು. ಮೃತರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೂಲತಃ ಹರಪನಹಳ್ಳಿ ತಾಲ್ಲೂಕಿನ ಕೆರೆಗುಡಿಹಳ್ಳಿ ಗ್ರಾಮದವರಾದ ನಾಗರಾಜ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯು (3ನೇ ಪುಟಕ್ಕೆ)

## ನಾಳೆಯಿಂದ ಸಿಇಟಿ ಪರೀಕ್ಷೆ

ಬೆಂಗಳೂರು, ಆ. 26 - ರಾಜ್ಯದಲ್ಲಿ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಒಟ್ಟು 530 ಪರೀಕ್ಷಾ ಕೇಂದ್ರಗಳಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿ.ಇ.ಟಿ.-2021) ನಡೆಸಲು ಅಗತ್ಯ ಮುನ್ನೆಚ್ಚರಿಕೆಗಳೊಂದಿಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ (2ನೇ ಪುಟಕ್ಕೆ)


### ಪ್ರಥಮ ವರ್ಷದ ಪುಣ್ಯ ಸ್ಮರಣೆ



ದಿ|| ಕೆ.ಆರ್. ಮಂಜುನಾಥ್
ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನಿಮ್ಮ ನೆನಪು ನಮಗೆ ಸದಾ ಹಚ್ಚ ಹಸಿರು, ಸ್ಫೂರ್ತಿದಾಯಕ, ನಿಮ್ಮ ಪ್ರೀತಿ,
ಆರೈಕೆ, ನೆನಪುಗಳೇ ನಮಗೆ ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ....

ಪತ್ನಿ : ಶ್ರೀಮತಿ ಸುಪ್ರಭಾ ಮಂಜುನಾಥ್, ಮಗ : ಕೆ.ಎಂ. ಗಗನ್
ತಮ್ಮ : ಶ್ರೀ ಕೆ.ಆರ್. ವಿಜಯಕುಮಾರ್, ಶ್ರೀಮತಿ ಲೀಲಾ
ಮಗ : ಕೆ.ವಿ. ಸಂಕೇತ್, ದಾವಣಗೆರೆ.
ಶ್ರೀ ಜಿ. ಎಸ್. ನಾಗರಾಜ್, ಶ್ರೀಮತಿ ಇಂದಿರ ಮತ್ತು ಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು, ದಾವಣಗೆರೆ.
ಕರಿಯಪ್ಪರ ವಂಶಸ್ಥರು, ಶಿರಮಗೊಂಡನಹಳ್ಳಿ.
ನಾಡಿಗರ ವಂಶಸ್ಥರು, ಬೆಳವನೂರು. ಹಾಗೂ ಬಂಧು-ಮಿತ್ರರು.





# ಜನಸ್ಪಂದನಾ ಸಭೆ : ಸರತಿಯಲ್ಲಿ ಅಹವಾಲು ಸಲ್ಲಿಸಿದ ಮುಖಂಡರು

ಹರಪನಹಳ್ಳಿ, ಆ.26- ವಿಶೇಷ ಜನಸ್ಪಂದನಾ ಸಭೆ ಮತ್ತು ಕುಂದುಕೊರತೆ ಸಭೆ ವೇಳೆ ಸಾರ್ವಜನಿಕರಂತೆ ಬಿಜೆಪಿಯ ಮುಖಂಡರು ಕೂಡ ಸರತಿ ಸಾಲಿನಲ್ಲಿ ಕುಳಿತು ಅಹವಾಲು ಸಲ್ಲಿಸಿದ ಪ್ರಸಂಗ ಪಟ್ಟಣದ ಹೊಸಪೇಟೆ ರಸ್ತೆಯಲ್ಲಿರುವ ಬಾಬು ಜಗಜೀವನ್‌ರಾಮ್ ಭವನದಲ್ಲಿ ನಡೆದಿದೆ.



ಬಿಜೆಪಿ ತಾಲ್ಲೂಕು ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ ಅವರು, ಕಳೆದ ಎರಡು ವರ್ಷಗಳ ಹಿಂದೆ ಪುರಸಭೆ ವ್ಯಾಪ್ತಿಯ ಮನೆಗಳಿಗೆ ಅಕ್ರಮ ಸಕ್ರಮದಲ್ಲಿ ಹಕ್ಕುಪತ್ರ ನೀಡಿದ್ದು, ಇದುವರೆಗೂ ಫಲಾನುಭವಿಗಳಿಗೆ ಖಾತೆ ನೀಡಿಲ್ಲ ಎಂದು ದೂರು ನೀಡಿದಾಗ, ತೊಡಕುಗಳನ್ನು ಸರಿಪಡಿಸುವಂತೆ ತಹಶೀಲ್ದಾರ್ ಮತ್ತು ಮುಖ್ಯಾಧಿಕಾರಿಗಳಿಗೆ ಶಾಸಕರು ತಾಕೀತು ಮಾಡಿದರು.

ಬೆಣ್ಣಿಹಳ್ಳಿ ಕರೇಗೌಡ ಮಾತನಾಡಿ, ನಾಡಕಛೇರಿಯಲ್ಲಿ ಗಣಕಯಂತ್ರ ನಿರ್ವಾಹಕರು ಜಮೀನಿಗೆ ಸಂಬಂಧಿಸಿದ ನಕಾಶೆ ತೆಗೆದು ಕೊಡಲು ಹದಿನೈದು ನೂರರಿಂದ ಎರಡು ಸಾವಿರದವರೆಗೆ ಹಣ ಕೇಳುತ್ತಾರೆ ಎಂದು ದೂರಿದರು. ಬಾಗಳಿ ಕೊಟ್ರೇಶಪ್ಪನವರು ಬಾಗಳಿ ಹಾಗೂ ಕೋಡಿಹಳ್ಳಿ ಗ್ರಾಮಗಳಲ್ಲಿ 10ಕ್ಕೂ ಹೆಚ್ಚು ವಿದ್ಯುತ್ ಪರಿವರ್ತಕಗಳು ದುರಸ್ತಿಯಲ್ಲಿದ್ದರೂ ಇದುವರೆಗೂ ಅಧಿಕಾರಿಗಳು ದುರಸ್ತಿಗೆ ಮುಂದಾಗಿಲ್ಲ ಎಂದರು. ಆಗ ಅಧಿಕಾರಿಗಳ ಮೇಲೆ ಗರಂ ಆದ ಶಾಸಕರು ಕೂಡಲೇ ಸರಿಪಡಿಸುವಂತೆ ತಿಳಿಸಿದರು.

ಕಾವಲಹಳ್ಳಿ, ತೌಡೂರು ಭಾಗದ ಅರಣ್ಯ ಭೂಮಿಯಲ್ಲಿ ಅನೇಕ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರಲಾಗಿದೆ. ಆದರೆ ಪಟ್ಟಾ ಕೊಟ್ಟಿಲ್ಲ. ಪಟ್ಟಾ ಕೊಟ್ಟವರಿಗೆ ಪಹಣಿ ಮಾಡಿಕೊಟ್ಟಿಲ್ಲ. ಅವರನ್ನು ಒಕ್ಕಲೆಬ್ಬಿಸುತ್ತಿದ್ದಾರೆ ಎಂದು ಗ್ರಾಮಸ್ಥರು ದೂರಿದರು. ವಿವಿಧೆಡೆ ಅನಧಿಕೃತ ಬ್ರಾಂಡಿ ಮಾರಾಟ ನಡೆಯುತ್ತದೆ. ಹಾಗೂ ಓಸಿ, ಮಟ್ಕಾ ಜೂಜಾಟ ನಡೆಯುತ್ತದೆ. ತಡೆಗಟ್ಟಿ ಎಂದು ಗುಡಿಹಳ್ಳಿ ಹಾಲೇಶ್ ಒತ್ತಾಯಿಸಿದಾಗ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸಂಬಂಧ ಪಟ್ಟವರಿಗೆ ಶಾಸಕರು ಸೂಚಿಸಿದರು

ಮತ್ತೂರು ಗ್ರಾಮದ ಬಳಿ ಸರ್ಕಾರಿ ಹುಲ್ಲುಗಾವಲಿನಲ್ಲಿ ಸಾಗುವಳಿ ಭೂಮಿಗೆ ಪಟ್ಟಾ ಕೊಡಿ ಎಂದು ಕೋರಿದಾಗ ತಹಶೀಲ್ದಾರ್ ಎಲ್.ಎಂ. ನಂದೀಶ್ ಅವರು ಹುಲ್ಲುಗಾವಲಿನಲ್ಲಿ ಪಟ್ಟಾ ಕೊಡಲು ಅವಕಾಶವಿಲ್ಲ ಎಂದು ಸ್ಪಷ್ಟ ಪಡಿಸಿದರು. ಆಗ ಶಾಸಕ ಕರುಣಾಕರ ರೆಡ್ಡಿಯವರು ಹುಲ್ಲುಗಾವಲಿನಲ್ಲಿ ಅವಕಾಶವಿಲ್ಲದಿದ್ದರೆ, ಕಂದಾಯ ಭೂಮಿಯಲ್ಲಿ ಸಾಗುವಳಿ ಮಾಡಿದವರಿಗೆ ಪಟ್ಟಾ, ಪಹಣಿ ನೀಡಿ ಎಂದು ಸೂಚಿಸಿದರು.

ಬಾಗಳಿ ಗ್ರಾಮದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಷಡಾಕ್ಷರಪ್ಪ ಅವರು ತಮಗೆ ನಿವೇಶನ ನೀಡುವಂತೆ ಮನವಿ ಮಾಡಿದ್ದು, ಅವಕಾಶವಿದ್ದರೆ ಕೊಡಿ ಎಂದು ತಹಶೀಲ್ದಾರ್ ಅವರಿಗೆ ಶಾಸಕರು ಸೂಚಿಸಿದರು.


ಮತ್ತಿಹಳ್ಳಿ, ಸಾಸ್ವಿಹಳ್ಳಿ, ಬಾಗಳಿ ಬಸ್ ಸೌಕರ್ಯ ಕಲ್ಪಿಸಿ ಎಂದು ಆ ಭಾಗದ ಜನರು ಕೇಳಿದರು. ಆದರ್ಶ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ, ಬಗೆಹರಿಸಿ ಎಂದು ಮನವಿ ಮಾಡಿದರು.

ಕಡತಿ, ಕಂಡಿಕೇರಿ, ವಟ್ಲಹಳ್ಳಿ ಭಾಗದಲ್ಲಿ ಜನ ಸಾಮಾನ್ಯರಿಗೆ ಕೆರೆಯ ಮಣ್ಣನ್ನು ಒಯ್ಯಲು ಬಿಡುವುದಿಲ್ಲ, ಆದರೆ ಶಾಮನೂರು ಶುಗರ್ಸ್ ನವರು ತೆಗೆದುಕೊಂಡು ಹೋದರೂ ಅಧಿಕಾರಿ ಗಳು ಸುಮ್ಮನಿರುತ್ತಾರೆ ಎಂದು ಜನರು ದೂರಿದರು.

ಶಾಸಕ ಜಿ. ಕರುಣಾಕರ ರೆಡ್ಡಿ ಮಾತನಾಡಿ, ಕೋವಿಡ್ ಹಿನ್ನೆಲೆಯಲ್ಲಿ ಈಗ ಪಟ್ಟಣದಲ್ಲಿ ಮಾತ್ರ ಜನಸ್ಪಂದನಾ ಕಾರ್ಯಕ್ರಮ ಮಾಡುತ್ತಿದ್ದೇವೆ. ಕೋವಿಡ್ ಇಳಿಮುಖವಾದ ನಂತರ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸುತ್ತೇವೆ ಎಂದು ಹೇಳಿದರು.

ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ, ಡಿವೈಎಸ್ಪಿ ವಿ.ಎಸ್. ಹಾಲಮೂರ್ತಿರಾವ್, ತಹಶೀಲ್ದಾರ್ ಎಲ್. ಎಂ.ನಂದೀಶ, ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್, ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಸಿಪಿಐ ನಾಗರಾಜ ಕಮ್ಮಾರ, ಪಿಎಸ್ಐ ಪ್ರಕಾಶ್, ವಲಯ ಅರಣ್ಯಾಧಿಕಾರಿ ಭರತ್ ತಳವಾರ, ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ, ಬಾಗಳಿ ಕೊಟ್ರೇಶಪ್ಪ, ಆರ್, ಲೋಕೇಶ್, ಯು.ಪಿ. ನಾಗರಾಜ ಇನ್ನಿತರರು ಪಾಲ್ಗೊಂಡಿದ್ದರು.

# ಅಕ್ರಮ ಲೇಔಟ್ ನಿರ್ಮಿಸಲು ಅವಕಾಶವಿಲ್ಲ



**(1ನೇ ಪುಟದಿಂದ)** ನೀಡಬೇಕೆಂಬುದೇ ನಮ್ಮ ಮೂಲ ಉದ್ದೇಶವಾಗಿದೆ. ಇದಕ್ಕಾಗಿ ಈಗಾ ಗಲೇ 51 ಎಕರೆ ಜಮೀನನ್ನು ಗುರುತಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಕೂಡ ಸಲ್ಲಿಸಲಾಗಿದ್ದು, ಬಡಾವಣೆ ನಿರ್ಮಿಸಲು ತಯಾರಿ ಕೂಡ ಮಾಡಿಕೊಳ್ಳಲಾಗುತ್ತಿದೆ. ಅಗತ್ಯ ಬಿದ್ದಲ್ಲಿ ಸೂಕ್ತ ಜಮೀನು ಸ್ವಾಧೀನಕ್ಕೆ ಮುಂದಾಗು ವುದಾಗಿ ತಿಳಿಸಿದ ಅವರು, ಕೆಲವೇ ತಿಂಗಳು ಗಳಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡುವ ಪ್ರಯತ್ನ ಮಾಡಲಾಗುವುದು ಎಂದರು.

ರಾಜನಹಳ್ಳಿ ಶಿವಕುಮಾರ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು, ತಮ್ಮ ಅವಧಿಯಲ್ಲೂ ಸಹ ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡುವ ಭರವಸೆಯನ್ನು ಶಿವಕುಮಾರ್ ನೀಡಿದರು.

## ದೂಡಾದ ನಿವೇಶನ ಉಚಿತ ಅಲ್ಲ

ನಿವೇಶನಕ್ಕೆ ಅರ್ಜಿ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಕೆಲವು ಗೊಂದಲಗಳಿರಬಹುದು. ಆದರೆ ದೂಡಾದಿಂದ ಯಾವುದೇ ನಿವೇಶನಗಳನ್ನು ಉಚಿತವಾಗಿ ನೀಡಲಾಗುವುದಿಲ್ಲ ಎಂದು ನೂತನ ಅಧ್ಯಕ್ಷ ದೇವರಮನಿ ಶಿವಕುಮಾರ್ ಸ್ಪಷ್ಟಪಡಿಸಿದರು.

ನಿವೇಶನಗಳ ಬೇಡಿಕೆಗೆ ದೂಡಾದಿಂದ ಅರ್ಜಿ ಕರೆಯಲಾಗಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ತದನಂತರ ರೈತರಿಂದ ಭೂಮಿ ಖರೀದಿಸಿ ಬಡಾವಣೆ ನಿರ್ಮಿಸಿ, ನಿಗದಿತ ಬೆಲೆಗೆ ಲಾಟರಿ ಮೂಲಕ ನಿವೇಶನ ಹಂಚಿಕೆ ಮಾಡಲಾಗುವುದು ಎಂದರು.

ನೂರು ರೂ. ಅರ್ಜಿ ಜೊತೆಗೆ ನಿವೇಶನದ ಅಳತೆಗೆ ಅನುಸಾರವಾಗಿ ಪಡೆಯುವ ಹಣದಿಂದ ಸಾರ್ವಜನಿಕರಿಗೆ ಹೊರೆಯಾಗುವುದಿಲ್ಲವೇ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ದೇವರಮನಿ ಅವರು, ಇದೀಗ ತಾನೆ ಅಧಿಕಾರ ಸ್ವೀಕರಿಸಿದ್ದೇನೆ. ಅಧಿಕಾರಿಗಳೊಂದಿಗೆ ಚರ್ಚಿಸಿ, ವಾಪಸ್ ಕೊಡಲು ಬರುತ್ತದೆ ಎಂದರೆ ಖಂಡಿತಾ ವಾಪಸ್ ಮಾಡಿಸಿಕೊಡುತ್ತೇನೆ. ಇಲ್ಲವಾದರೆ ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದರು.

## ಶೀಘ್ರವೇ ಬಾತಿ ಕೆರೆ ದೂಡಾಕ್ಕೆ ಹಸ್ತಾಂತರ

**(1ನೇ ಪುಟದಿಂದ)** ಕೋಟಿ ರೂ.ಗಳಷ್ಟು ಕಾಮಗಾರಿಗಳಾಗಿವೆ. ಇದೀಗ ಅಧಿಕಾರ ವಹಿಸಿಕೊಂಡ ದೇವರಮನಿ ಶಿವಕುಮಾರ್ ಅವ ರಿಗೆ ಯಾವುದೇ ಆಸೆ- ಆಕಾಂಕ್ಷಿಗಳಿಲ್ಲ. ಉತ್ತಮ ಆಡಳಿತ ನೀಡಲಿ ಎಂದು ಶುಭ ಹಾರೈಸಿದರು.

ನೂತನ ಅಧ್ಯಕ್ಷ ದೇವರಮನಿ ಶಿವಕುಮಾರ್ ಮಾತನಾಡಿ, ಸಾರ್ವಜನಿಕರು ದೂಡಾ ಕಚೇರಿಗೆ ಬಂದು ತಮ್ಮ ಅಹವಾಲುಗಳನ್ನು ಸಲ್ಲಿಸಿದ 15 ದಿನಗಳೊಳಗಾಗಿ ಕಾನೂನಾತ್ಮಕವಾಗಿ ವಿಲೇವಾರಿ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಮೇಯರ್ ಎಸ್.ಟಿ. ವೀರೇಶ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಬಿಜೆಪಿ ಮುಖಂಡ ಕೆ.ಬಿ. ಶಂಕರನಾರಾಯಣ, ದೂಡಾ ನೂತನ ಸದಸ್ಯರಾದ ಮಾರುತಿರಾವ್ ಘಾಟ್ಗೆ, ಲಕ್ಷ್ಮಣ್, ಬಾತಿ ಚಂದ್ರಶೇಖರ್, ಶ್ರೀಮತಿ ಗೌರಮ್ಮ ವಿ. ಪಾಟೀಲ್, ಆಯುಕ್ತ ಬಿ.ಟಿ. ಕುಮಾರಸ್ವಾಮಿ, ಎಣ್ಣೆ ಶ್ರೀಕರ, ಯುವ ಮುಖಂಡ ಪಿ.ಸಿ. ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

## ಬಾಲ ಬಿಚ್ಚಿದರೆ !

**(1ನೇ ಪುಟದಿಂದ)** ಜಾಮೀನಿನ ಮೇಲೆ ಹೊರಗಿರುವವರು ಅಪರಾಧಿ ಕೃತ್ಯಗಳಲ್ಲಿ ತೊಡಗಿದ್ದರೆ ಜಾಮೀನು ರದ್ದುಗೊಳಿಸಲು ಕ್ರಮವಹಿಸಲಾ ಗುವುದು ಎಂದು ತಿಳಿಸಿದರು. ಕೆಲವು ರೌಡಿಶೀಟರ್‌ಗಳಿಗೆ ವಯಸ್ಸಾಗಿದ್ದು, ಹಿಂದಿನ ಕೃತ್ಯಗಳನ್ನು ಬಿಟ್ಟು ಒಳ್ಳೆಯ ಜೀವನ ನಡೆಸುತ್ತಿದ್ದಾರೆ. ಸನ್ನಡತೆ ಆಧಾರದಲ್ಲಿ ಅಂತಹವರನ್ನು ರೌಡಿಶೀಟರ್ ಪಟ್ಟಿಯಿಂದ ಕೈಬಿಡುವ ಬಗ್ಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಎಸ್ಪಿ ಎಂ. ರಾಜೀವ್, ಡಿವೈಎಸ್ಪಿ ನಾಗೇಶ್ ಐತಾಳ್, ಸಿಪಿಐ ಸುರೇಶ್ ಸಗರಿ, ಗಜೇಂದ್ರಪ್ಪ, ಮಂಜುನಾಥ್ ಹಾಗೂ ಇತರರಿದ್ದರು.

## ಜಿಎಸ್‌ಟಿ ಪರಿಹಾರ

**(1ನೇ ಪುಟದಿಂದ)** ನೀಡಲಾಗುತ್ತಿದೆ. ಇದರ ಜೊತೆಗೆ, ಜಿಎಸ್‌ಟಿ ಪರಿಹಾರವನ್ನು 2022ರ ನಂತರದ ಅವಧಿಗೂ ವಿಸ್ತರಿಸುವಂತೆ ಕೇಳಿದ್ದೇನೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಕೊರೊನಾ ಬಿಕ್ಕಟ್ಟಿನ ನಂತರ ಜಿಎಸ್‌ಟಿ ಸಂಗ್ರಹ ರಾಜ್ಯದಲ್ಲಿ ಸ್ಥಿರವಾಗಿಲ್ಲ ಎಂದಿರುವ ಬೊಮ್ಮಾಯಿ, ಕರ್ನಾಟಕ ಜಿಎಸ್‌ಟಿ ಅವಧಿಯಲ್ಲಿ ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಕೊರೊನಾ ನಂತರ ಇದುವರೆಗೂ ಪರಿಸ್ಥಿತಿ ಸ್ಥಿರವಾಗಿಲ್ಲ ಎಂದಿದ್ದಾರೆ.

# ಉದ್ಯಮಿ ನಂದಿಗಾವಿ ಶ್ರೀನಿವಾಸ್ ಸೇವೆ ಮಾದರಿ

ಮಲೇಬೆನ್ನೂರು, ಆ.26- ಕೋವಿಡ್ ಮೊದಲ ಹಾಗೂ ಎರಡನೇ ಅಲೆಯ ಸಂದರ್ಭದಲ್ಲಿ ನಂದಿಗಾವಿ ಶ್ರೀನಿವಾಸ್ ಅವರು ಸಲ್ಲಿಸಿದ ಸೇವೆ ಮಾದರಿಯಾಗಿದೆ ಎಂದು ಹರಿಹರ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಮೆಚ್ಚುಗೆ ವ್ಯಕ್ತಪಡಿಸಿದರು.



ಕೊಮಾರನಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿ ರಂಗನಾಥ ಸಮುದಾಯ ಭವನದಲ್ಲಿ ಆಟೋ ಚಾಲಕರ ಸಂಘದಿಂದ ಉದ್ಯಮಿ ನಂದಿಗಾವಿ ಶ್ರೀನಿವಾಸ್ ಅವರಿಗೆ ಅವರಿಗೆ ಇಂದು ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಯಾವುದೇ ಉದ್ದೇಶ ಇಟ್ಟುಕೊಳ್ಳದೆ ನಿರಂತರ ಸಮಾಜ ಸೇವೆ ಮಾಡುತ್ತಿರುವ ನಂದಿಗಾವಿ ಶ್ರೀನಿವಾಸ್ ಅವರಿಗೆ ಭಗವಂತ ಇನ್ನಷ್ಟು ಉತ್ತಮ ಕೆಲಸ ಮಾಡಲು ಶಕ್ತಿ ನೀಡಲೆಂದು ಮಂಜುನಾಥ್ ಶುಭ ಹಾರೈಸಿದರು.

ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ ಮಾತನಾಡಿ, ಸ್ಯಾನಿಟೈಜ್ ಮಾಡುವ ಮೂಲಕ ಹಳ್ಳಿಗಳಲ್ಲಿ ಮಲೇರಿಯಾ, ಡೆಂಗ್ಯೂ ಸೇರಿದಂತೆ, ಇತರೆ ಸಾಂಕ್ರಾಮಿಕ ಕಾಯಿಲೆಗಳು ಹರಡದಂತೆ ಶ್ರೀನಿವಾಸ್ ಮಾಡಿದ್ದಾರೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ಮಾತನಾಡಿ, ಶ್ರೀನಿವಾಸ್ ಅವರು ನಮ್ಮ ಪಕ್ಷಕ್ಕೆ ಸೇರಿರುವುದು ನಮಗೆ ಶಕ್ತಿ ತಂದಿದೆ ಎಂದರು. ಬ್ಲಾಕ್ ಕಾಂಗ್ರೆಸ್ ಒಬಿಸಿ ಅಧ್ಯಕ್ಷ ಕೆ.ಪಿ. ಗಂಗಾಧರ್, ಹಾಲಿವಾಣ ಗ್ರಾ.ಪಂ. ಮಾಜಿ ಅಧ್ಯಕ್ಷ ಎಸ್. ಎಂ. ಮಂಜುನಾಥ್, ಮಾಜಿ ಉಪಾಧ್ಯಕ್ಷ ಪರಮೇಶ್ವರ ನಾಯ್ಕ ಮತ್ತಿತರರು ಮಾತನಾಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಂದಿಗಾವಿ ಶ್ರೀನಿವಾಸ್ ಅವರು, ದುಡಿಮೆಯ ಸ್ವಲ್ಪ ಭಾಗವನ್ನು ಸಮಾಜ ಸೇವೆಗೆ ಬಳಸುತ್ತಿದ್ದೇನೆ. ಕೋವಿಡ್ ವೇಳೆ ಜನರಿಗೆ ಫುಡ್‌ಕಿಟ್ ಹಾಗೂ ಕೊರೊನಾ ವಾರಿಯರ್‌ಗಳಿಗೆ ಹೆಲ್ತ್‌ಕಿಟ್, ಆಯುಷ್ ಕಿಟ್, ಹಬೆ ಯಂತ್ರ ಸೇರಿದಂತೆ, ಅಗತ್ಯ ವಸ್ತುಗಳನ್ನು ನೀಡಿರುವುದು ನನಗೆ ಹೆಚ್ಚು ಖುಷಿ ಕೊಟ್ಟಿದೆ ಎಂದು ಹೇಳಿದರು.

ಮಲೇಬೆನ್ನೂರು ಪುರಸಭೆ ಮಾಜಿ ಸದಸ್ಯ ಆರೀಫ್ ಅಲಿ, ಪಿಡಬ್ಲ್ಯೂಡಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಹಾಲಿವಾಣ, ಗ್ರಾ.ಪಂ. ಸದಸ್ಯರಾದ ಎಂ.ಆರ್. ಬಸವರಾಜ್, ಚಿಕ್ಕಣ್ಣ, ಹಾಲೇಶ್, ವೀರಣ್ಣ, ಜಿಗಳಿ ಗ್ರಾ.ಪಂ. ಸದಸ್ಯ ಕೆ.ಜಿ. ಬಸವರಾಜ್, ಆಟೋ ಚಾಲಕರ ಸಂಘದ ಬೇವಿನಹಳ್ಳಿಯ ಹೆಚ್. ಬಸವರಾಜ್, ಹರಳಹಳ್ಳಿ ಚಂದ್ರಪ್ಪ, ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದ ಬಸವರಾಜ್ ದೊಡ್ಮನಿ, ಹರಳಹಳ್ಳಿ ಮಂಜು, ಹರಿಹರದ ಮಂಜು, ಮಾರುತಿ, ಕನಕ ಯುವ ಬ್ರಿಗೇಡ್ ಅಧ್ಯಕ್ಷ ಉದ್ದಣ್ಣರ ಅಣ್ಣೇಶ್ ಇನ್ನಿತರರು ಹಾಜರಿದ್ದರು.

# ಸಂಪುಟ ವಿಸ್ತರಣೆ ಇಲ್ಲ, ಖಾತೆ ಬದಲಾವಣೆಯೂ ಇಲ್ಲ

**(1ನೇ ಪುಟದಿಂದ)** ಮಾಡಿಕೊಳ್ಳಿ. ಯಾರೋ ಬೆದರಿಕೆ ಹಾಕಿದರು ಎಂಬ ಕಾರಣಕ್ಕೆ ಮಣಿಯುತ್ತಾ ಕೂರಬೇಡಿ. ಹಾಗೆ ಮಾಡಿದರೆ ನಿಮ್ಮ ಜವಾಬ್ದಾರಿಗೆ ಅರ್ಥ ಇರುವುದಿಲ್ಲ.

ಪಕ್ಷ ಎಲ್ಲ ಕೋನಗಳಿಂದಲೂ ಅಳೆದು ತೂಗಿ ನಿಮಗೆ ಮಂತ್ರಿಮಂಡಲ ರಚನೆಗೆ ಅವಕಾಶ ಕೊಟ್ಟಿದೆ. ಇದನ್ನು ಪ್ರಶ್ನಿಸುವವರಿಗೆ ನಮ್ಮ ಪಕ್ಷದಲ್ಲಿ ಜಾಗವಿಲ್ಲ. ಇಲಾಖೆ ರಚನೆ ಮಾಡಿರುವುದಾದರೂ ಏತಕ್ಕೆ. ಆ ಇಲಾಖೆಗಳಿಗೆ ಬೆಲೆ ಇಲ್ಲವೇ ಎಂದು ಅಮಿತ್ ಷಾ, ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದ್ದಾರೆ. ಆಡಳಿತ ಮತ್ತು ಸಂಘಟನೆ ದೃಷ್ಟಿಯಿಂದ ಅಗತ್ಯವಿದ್ದಾಗ ಮಂತ್ರಿಮಂಡಲದ ಖಾಲಿ ಸ್ಥಾನಗಳನ್ನು ರಾಷ್ಟ್ರೀಯ ಅಧ್ಯಕ್ಷರೊಟ್ಟಿಗೆ ಚರ್ಚಿಸಿ, ಭರ್ತಿ ಮಾಡುವ ಬಗ್ಗೆ ತೀರ್ಮಾನ ಮಾಡಿ ಎಂದಿದ್ದಾರೆ.

# ರಾಜ್ಯದಲ್ಲಿ ನಾಳೆಯಿಂದ ಸಿಇಟಿ ಪರೀಕ್ಷೆ

**(1ನೇ ಪುಟದಿಂದ)** ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದ್ದಾರೆ.

ಒಟ್ಟು 2,01,816 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಸಿದ್ದು, ಕೋವಿಡ್ ಅನ್ನು ಗಮನದಲ್ಲಿರಿಸಿಕೊಂಡು ಎಲ್ಲಾ ಮುನ್ನೆಚ್ಚರಿಕೆಗಳೊಂದಿಗೆ ಪರೀಕ್ಷೆ ನಡೆಸಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದ್ದಾರೆ.


ನಾಡಿದ್ದು ದಿನಾಂಕ 28ರಂದು ಜೀವಶಾಸ್ತ್ರ ಮತ್ತು ಗಣಿತ ವಿಷಯಗಳಿಗೆ ಪರೀಕ್ಷೆ ನಡೆದರೆ, ದಿನಾಂಕ 29ರಂದು ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯಗಳಿಗೆ ಪರೀಕ್ಷೆ ನಡೆಯಲಿದೆ. ಹೊರನಾಡು ಹಾಗೂ ಗಡಿಭಾಗದ ವಿದ್ಯಾರ್ಥಿಗಳಿಗೆ ಕನ್ನಡ ಪರೀಕ್ಷೆಯು ದಿನಾಂಕ 30ರಂದು ನಿಗದಿಯಾಗಿದೆ.

530 ಪರೀಕ್ಷಾ ಕೇಂದ್ರಗಳ ಪೈಕಿ 86 ಕೇಂದ್ರಗಳು ಬೆಂಗಳೂರಿನಲ್ಲಿದ್ದರೆ, ಉಳಿದ 444 ಕೇಂದ್ರಗಳು ಇನ್ನುಳಿದ ಜಿಲ್ಲೆಗಳಲ್ಲಿವೆ. ಆಯಾ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಸಹಾಯಕ ಆಯುಕ್ತರ ಮಟ್ಟದ ಅಧಿಕಾರಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರನ್ನಾಗಿ ನೇಮಕ ಮಾಡಿದ್ದಾರೆ ಎಂದು ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಪರೀಕ್ಷೆ ನಡೆಯುವ ದಿನಗಳಂದು ಗೃಹ ಇಲಾಖೆಯು ಸೂಕ್ತ ಪೊಲೀಸ್ ವ್ಯವಸ್ಥೆ ಮಾಡಲಿದೆ. ಜೊತೆಗೆ ಒಟ್ಟು 530 ವೀಕ್ಷಕರು, 1060 ವಿಶೇಷ ಜಾಗೃತ ದಳದ ಸದಸ್ಯರು, 530 ಪ್ರಶ್ನೆಪತ್ರಿಕೆ ಪಾಲಕರು, 8409 ಕೊಠಡಿ ಮೇಲ್ವಿಚಾರಕರು ಹಾಗೂ 20,415 ಅಧಿಕಾರಿ ವರ್ಗದ ಸಿಬ್ಬಂದಿಯನ್ನು ಈ ಕಾರ್ಯಕ್ಕಾಗಿ ನಿಯೋಜಿಸಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ಹೊರನಾಡು ಮತ್ತು ಗಡಿನಾಡು ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆಯು ಇದೇ 30ರಂದು 6 ಸ್ಥಳಗಳಲ್ಲಿ ನಡೆಯಲಿದೆ. ಬೆಂಗಳೂರು, ಬೀದರ್, ವಿಜಯಪುರ, ಬಳ್ಳಾರಿ, ಬೆಳಗಾವಿ ಮತ್ತು ಮಂಗಳೂರು ಕೇಂದ್ರಗಳಲ್ಲಿ ನಡೆಯುವ ಈ ಪರೀಕ್ಷೆಗೆ 1682 ವಿದ್ಯಾರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ತಿಳಿಸಿದರು.

## ಬಸವನಾಳು ಚಿಕ್ರಪ್ಪರ ಜಯ್ಯಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಸವನಾಳು ಗ್ರಾಮದ ವಾಸಿ ಚಿಕ್ರಪ್ಪರ ಜಯ್ಯಪ್ಪ (80) ಇವರು ದಿನಾಂಕ 26.08.2021ರ ಗುರುವಾರ ಬೆಳಗ್ಗೆ 11.45ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.08.2021ರ ಶುಕ್ರವಾರ ಬೆಳಗ್ಗೆ 10.30ಕ್ಕೆ ಬಸವನಾಳು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.


**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಶಿಕ್ಷಕಿಯರು ಬೇಕಾಗಿದ್ದಾರೆ**
B.A B.Ed - 2 (Social)
B.A B.Ed - 2 (English)
B.Sc - 2
ಮೌಂಟ್ ಎವರೆಸ್ಟ್ ವಿದ್ಯಾಲಯ
ಜಯನಗರ, ನಿಟುವಳ್ಳಿ, ದಾವಣಗೆರೆ.
91136-10789
97439-24203

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30x40, ಅಕ್ಕ-ಪಕ್ಕ, ಪೂರ್ವ, ಶಿವ ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ, ಡಾಲರ್ಸ್ ಕಾಲೋನಿಯಲ್ಲಿ, 30x50, ಉತ್ತರ, 30x50 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ಪಾಠಕ್ಕೆ ಟೀಚರ್ ಬೇಕಾಗಿದ್ದಾರೆ**
8ನೇ ತರಗತಿ CBSE ವಿದ್ಯಾರ್ಥಿಗೆ ಮನೆ ಪಾಠಕ್ಕೆ English ಮಾತಾಡಲು ಮತ್ತು English Grammer ಬಲ್ಲ ಟೀಚರ್ ಬೇಕಾಗಿದ್ದಾರೆ.
ನಿಂಚನ ಸ್ಕೂಲ್ ಎದುರು, ನಿಟುವಳ್ಳಿ
ಮೊ. : 98444 81661

**ರೊಟ್ಟಿ, ಚಪಾತಿ ಮಾಡಲು ಬೇಕಾಗಿದ್ದಾರೆ**
ರೊಟ್ಟಿ, ಚಪಾತಿ ಮತ್ತು ಕ್ಲೀನಿಂಗ್ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ :
ಶ್ರೀ ಬಸವೇಶ್ವರ ಖಾನಾವಳಿ
ರಾಯ್ಕರ್ ಜ್ಯೂಯಲರ್ಸ್ ಎದುರು, ಚರ್ಚ್ ರಸ್ತೆ, ರಾಂ ಅಂಡ್ ಕೋ ಸರ್ಕಲ್ ಹತ್ತಿರ, ದಾವಣಗೆರೆ.
ಮೊ. 94487 25286

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರ, ತರಳಬಾಳು ಬಡಾವಣೆಯಲ್ಲಿ 2ನೇ ಮಹಡಿಯಲ್ಲಿ 2 ಬೆಡ್‌ರೂಂ, ವಿನಾಯಕ ಬಡಾವಣೆಯಲ್ಲಿ 2 ಬೆಡ್‌ರೂಂ ಮನೆ ಲೀಸ್‌ಗೆ ಇವೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**SITE FOR SALES**
Site No 58, Jayanagar Near Saibab Temple, SS Hospital Road. Measurement 30×55 North Facing- 40 Feet Road.
Hemantha Raju
94810 35951
Brokers will not be entertained

**VS Paramedical College**
SSLC ಪಾಸ್/PUC ಪಾಸ್/ಫೇಲ್
Course (DHI)
DIPLOMA HEALTH INSPECTOR
ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
9019580600, 8553278258

**ತಕ್ಷಣ ಬೇಕಾಗಿದ್ದಾರೆ**
MANCA MEDICINS ಅಲ್ಲಿ ಕೆಲಸ ಮಾಡಲು ಅನುಭವವಿರುವ ಹುಡುಗರು ಮತ್ತು PHARMACIST ಗಳು ಬೇಕಾಗಿದ್ದಾರೆ.
63618 30470

**WANTED**
Computer Operator (Female), Field work (Male / Female), Part time Workers (Female)
Davangere.
78923 28599

**HOUSE FOR LEASE**
2 BHK House for lease Doggalli Compound, 1st Floor Davangere.
94485 76399

GST Registration-Retturns Filing INCOME TAX & GST CASE, Project Reports and for Accounts Maintenances
Contact
MEGHANA ASSOCIATES (R)
99809 16126

**Looking for Investors**
to expand our Existing Business at 3% FRI
Call for more details
90089 85112

**ಮನೆ ಬಾಡಿಗೆಗಿದೆ**
#853/6 ಮೊದಲನೇ ಹಂತ, 2ನೇ ಮೇನ್, 6ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ, ಸಿಂಗಲ್ ಬೆಡ್ ರೂಂ ಮನೆ CMC ಹಾಗೂ Bore ನೀರಿನ ವ್ಯವಸ್ಥೆ ಇರುವ ವಿಶಾಲವಾದ ಪಾರ್ಕಿಂಗ್ ಇರುವ ಮನೆ ಬಾಡಿಗೆಗಿದೆ.
ದಾವಣಗೆರೆ.
63618 93176, 82176 21050

**WANTED**
Candidate Wanted for Office Administration & Accountant. Experience required min 2 years .Salary 6000-8000 per month. Mail ur resume to
fininfinitydvg@yahoo.com

**ಬೇಕಾಗಿದ್ದಾರೆ**
ಶ್ರೀ ಮೈತ್ರಿ ಉಜ್ವಲ ಕೇಂದ್ರ, ದಾವಣಗೆರೆ ಇಲ್ಲಿ ಸಮಾಜ ಸೇವಕರ ಕೆಲಸಕ್ಕೆ ಬೇಕಾಗಿದ್ದಾರೆ. ಮಹಿಳೆಯರಿಗೆ ಮಾತ್ರ ಅವಕಾಶ. ವಿದ್ಯಾರ್ಹತೆ ಪದವೀಧರರು ಅಥವಾ ಸ್ನಾತಕೋತ್ತರ ಪದವೀಧರರು ಸಂಪರ್ಕಿಸಿ
94498 25054

**CRASH COURSE**
For NEET/SSLC/2nd PUC
Tuition100% Results with solved notes.
Sinchana Academy
Near Ram and Co Cricle Davangere
90195 80600, 85532 78258

**ದೂಡಾ ನಿವೇಶನಗಳಿಗೆ ಅರ್ಜಿ**
ದಾವಣಗೆರೆ ದೂಡಾ ನಿವೇಶನಗಳಿಗೆ ಅರ್ಜಿ ಹಾಕಲು ಸಂಪರ್ಕಿಸಿ.
ಕೊನೆಯ ದಿನಾಂಕ 04.09.2021
77607 71714
95387 71714

**ಮನೆ ಮಾರಾಟಕ್ಕಿದೆ**
2 ಬೆಡ್‌ರೂಂಗಳು ಉಳ್ಳ ಎಲ್ಲಾ ರೀತಿಯ ಸೌಲಭ್ಯಗಳನ್ನು ಹೊಂದಿರುವ ಅಪಾರ್ಟ್‌ಮೆಂಟ್‌ನಲ್ಲಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
70198 75783
90305 19030

**ಬೇಕಾಗಿದ್ದಾರೆ**
ಕುರಿ ಮತ್ತು ಹಸು ಫಾರ್ಮ್‌ನಲ್ಲಿ ಕೆಲಸ ಮಾಡಲು ಕುಟುಂಬ ಕೆಲಸಗಾರರು ಬೇಕಾಗಿದ್ದಾರೆ.
94482 29430

**WANTED**
• Works Manager
• Floor Supervisor
Note: Only Experience Candidates
Good Salary
ESI PF + Incentive
Only Male Candidate
SRINIVASA HONDA
Contact : 8884445242

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
PUC or any degree
ವಿಳಾಸ:- ಕಾವೇರಿ ಮೆಡಿಹೌಸ್ ಪ್ರೈ. ಲಿ
ಚೇತನಾ ಹೋಟೆಲ್ ಹತ್ತಿರ
ದಾವಣಗೆರೆ-577004

**ಬೇಕಾಗಿದ್ದಾರೆ**
ಉತ್ತಮ ಫರ್ನಿಚರ್‌ವುಳ್ಳ ಪರಿಮಳ ಬಾರ್‌ನಲ್ಲಿ ನಾನ್ ವೆಜ್ ರೆಸ್ಟೋರೆಂಟ್ ನಡೆಸಲು ಬೇಕಾಗಿದ್ದಾರೆ. ಆಸಕ್ತಿವುಳ್ಳವರು ಸಂಪರ್ಕಿಸಿ
99455 99925

**JOBS**
MCS ACADEMY
Training & Placement Cell
98444 92888

**ಮನೆ ಬಾಡಿಗೆಗೆ/ಲೀಸ್‌ಗೆ**
2 ಬೆಡ್‌ರೂಮ್ ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ
93410 12022

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಗೆ ಕಾಫಿ ಸರ್ವ್ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ವಯಸ್ಸು : 20 ರಿಂದ 30 ವರ್ಷ, ಹೋಟೆಲ್‌ನಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ. ಕೂಡಲೇ ಸಂಪರ್ಕಿಸಿ :
ಆಂಜನೇಯ ಬಡಾವಣೆ, ದಾವಣಗೆರೆ.
ಮೊ. : 93804 69079

**ಮನೆ ಬಾಡಿಗೆಗಿದೆ**
3 ಬೆಡ್‌ರೂಂ ಹೊಂದಿರುವ ಸುಸಜ್ಜಿತ ಮನೆ ಮೊದಲನೇ ಮಹಡಿ, ಪಾರ್ಕ್ ಎದುರುಗಡೆ, 2ನೇ ಬಸ್ ಸ್ಟಾಪ್, ವಿದ್ಯಾನಗರ, ದಾವಣಗೆರೆಯಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ: 98455 88889

**AVOID MOSQUITOES**
Mosquito Net For Doors & Windowes. Design Boards, ACP, MDF Available.
SRI GOWRI ENTERPRISES
# 7, 4th Cross, Karur Industrial Area. Davangere-6
72049 94628

**ಬೇಕಾಗಿದ್ದಾರೆ**
ಆಫೀಸ್ ಬಾಯ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಎಸ್. ಟಿ. ಸೋಮಶೇಖರ್
ದಾವಣಗೆರೆ.
98803 37686

**ನೂತನ ಹೋಟೆಲ್ ಪ್ರಾರಂಭ**
ನಗರದ ಶಾಮನೂರು ರಸ್ತೆಯಲ್ಲಿರುವ ಬಾಟ್ಲಿ ಬಿಲ್ಡಿಂಗ್‌ನ ಪ್ರಮೋದ್ ಬಾರ್‌ನಲ್ಲಿ ನೂತವಾಗಿ ಆಂಧ್ರ ಶೈಲಿಯಲ್ಲಿ ವೆಜ್ & ನಾನ್ ವೆಜ್ ರೆಸ್ಟೋರೆಂಟ್ ಪ್ರಾರಂಭವಾಗಿರುತ್ತದೆ ಮತ್ತು ಪಾರ್ಸೆಲ್‌ಗಾಗಿ ಸಂಪರ್ಕಿಸಿ
73534 89791
63614 95110

**TO-LET**
1. Ground Floor, 1BHK near Bakkeshwara School, MC Colony, 2. First Floor - 1 BHK House at 8th Main, P J Extension
is available for Rent/Lease
Contact: 76764 92366

NGO-ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ
MEGHANA ASSOCIATES (R)
99809 16126

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಕೆಲಸಕ್ಕೆ ಬೇಕಾಗಿದ್ದಾರೆ**
ಆಯುರ್ವೇದಿಕ್ ಅಂಗಡಿಗೆ ಡೆಲಿವರಿ ಕೆಲಸಕ್ಕೆ ಹುಡುಗರು ಮತ್ತು ಮಧ್ಯಮ ವಯಸ್ಕರು ಬೇಕಾಗಿದ್ದಾರೆ.
ಸಂಪರ್ಕಿಸಿ: ಧನ್ವಂತರಿ ಮಾರ್ಕೆಟಿಂಗ್
79756 32835, 90369 26343

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783


॥ ಶ್ರೀ ಜಿವ್ದೇಶ್ವರ ಪ್ರಸನ್ನ ॥
**ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಸಿಟಿ ವಾಸಿ,
ಶ್ರೀ ಹನುಮಂತಪ್ಪ ಕ್ಷೀರಸಾಗರ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 15.8.2021ರ ಭಾನುವಾರ ಬೆಳಿಗ್ಗೆ 6 ಗಂಟೆಗೆ ನನ್ನ ಧರ್ಮಪತ್ನಿಯಾದ
ಶ್ರೀಮತಿ ಶಾಂತಮ್ಮ
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ವೈಕುಂಠ ಸಮಾರಾಧನೆಯನ್ನು
ದಿನಾಂಕ 27.8.2021ನೇ ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ
ದಾವಣಗೆರೆ ಕುಂದುವಾಡ ರಸ್ತೆ, ಸಪ್ತಗಿರಿ ಹಾಸ್ಟೆಲ್ ಹಿಂಭಾಗ, ಬಸವೇಶ್ವರ ನಗರ, # 3428 C/1, ಮೃತರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀ ಹನುಮಂತಪ್ಪ ಕ್ಷೀರಸಾಗರ ಮತ್ತು ಮಕ್ಕಳು ಹಾಗೂ ಕ್ಷೀರಸಾಗರ ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊ. : 9972254984, 9035108160, 8660546614

**ಏಳನೇ ವರ್ಷದ ಪುಣ್ಯಸ್ಮರಣೆ**

ಜನನ: 28.06.1945
ಲಿಂಗೈಕ್ಯ: 27.08.2014
ದಿ॥ ಶ್ರೀ ಟಿ. ಪಂಚಾಕ್ಷರಪ್ಪ ಮರಿಸ್ವಾಮಿ
ಶೈಲ ಹೊಸೈರೀಸ್, ಮಂಡಿಪೇಟೆ, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ,
ಶ್ರೀಮತಿ ಟಿ.ಪಿ. ಸೌಭಾಗ್ಯಮ್ಮ ಪಂಚಾಕ್ಷರಪ್ಪ ಮತ್ತು ಮಕ್ಕಳು.ಸಹೋದರರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಸ್ವಾಮಿ ವಂಶಸ್ಥರು ಹಾಗೂ ಬಂಧು-ಮಿತ್ರರು.

# ರಾಣೇಬೆನ್ನೂರಿಗೆ ನಾಳೆ ಮುಖ್ಯಮಂತ್ರಿ ಬೊಮ್ಮಾಯಿ



ರಾಣೇಬೆನ್ನೂರು, ಆ.26- ನಾಡಿದ್ದು ದಿನಾಂಕ 28 ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಣೇಬೆನ್ನೂರಿಗೆ ಆಗಮಿಸಿ. 170.71 ಕೋಟಿ ರೂ. ವೆಚ್ಚದ ಪೂರ್ಣಗೊಂಡಿರುವ ಕೆಲ ಕಾಮಗಾರಿಗಳ ಉದ್ಘಾಟನೆ ಹಾಗೂ ಕೆಲ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಿದ್ದಾರೆಂದು ಶಾಸಕ ಅರುಣಕುಮಾರ ಪೂಜಾರ ತಿಳಿಸಿದರು.

ಶಾಸಕರು ಇಂದು ಸಂಜೆ ತಮ್ಮ ಸಾರ್ವಜನಿಕ ಸಂಪರ್ಕ ಕಛೇರಿಯಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಗರದ ಜನತೆಗೆ ನಿರಂತರ ಕುಡಿಯುವ ನೀರು ಸರಬರಾಜಿಗಾಗಿ 24×7 ಯೋಜನೆಗೆ 9 ವಿಭಾಗಗಳನ್ನು ಮಾಡಿದ್ದು, ಅವುಗಳಲ್ಲಿ ಪೂರ್ಣಗೊಂಡ 5 ವಿಭಾಗಗಳಿಗೆ ಮುಖ್ಯಮಂತ್ರಿಗಳು ಚಾಲನೆ ನೀಡುವರು ಎಂದು ಹೇಳಿದರು.

ಎಪಿಎಂಸಿ ಸಮುದಾಯ ಭವನ, ರೈತ ಸಂಪರ್ಕ ಕೇಂದ್ರ, ಪಿ.ಯು. ಕಾಲೇಜು ಕಟ್ಟಡ, ಕುಪ್ಪೇಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಉದ್ಘಾಟನೆ, ನಗರದ ದೊಡ್ಡಕೆರೆ ಸೇರಿದಂತೆ ಕಮದೋಡ, ಕರೂರು, ಚಳಗೇರಿ ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಕಾಮಗಾರಿಗಳಿಗೆ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ ಎಂದು ಶಾಸಕರು ತಿಳಿಸಿದರು.

ಎಲ್ಲ ಕಾರ್ಯಕ್ರಮಗಳು ಎಪಿಎಂಸಿ ಸಭಾ ಭವನದಲ್ಲಿ ನಡೆಯಲಿದ್ದು, ಸಚಿವರಾದ ಗೋವಿಂದ ಕಾರಜೋಳ, ಎಸ್.ಟಿ. ಸೋಮಶೇಖರ್, ಭೈರತಿ ಬಸವರಾಜ, ಬಿ.ಸಿ. ಪಾಟೀಲ, ಎಂ.ಟಿ.ಬಿ. ನಾಗರಾಜ ಆಗಮಿಸುವರು.

ಶಾಸಕರ ಜೊತೆಗೆ ಬಿಜೆಪಿ ಮುಖಂಡರಾದ ಎಸ್.ಎಸ್. ರಾಮಲಿಂಗಣ್ಣನವರ, ಕೆ. ಶಿವಲಿಂಗಪ್ಪ, ಚೋಳಪ್ಪ ಕಸವಾಳ, ನಗರಸಭೆ ಅಧ್ಯಕ್ಷರು ಹಾಗೂ ಸದಸ್ಯರು ಜೊತೆಗಿದ್ದರು.

# ಕಳಪೆ ಕಾಮಗಾರಿ ಉದ್ಘಾಟನೆಗೆ ಸಿಎಂ ಆಗಮನ : ರೈತ ಸಂಘ

**ರಾಣೇಬೆನ್ನೂರು**

ರಾಣೇಬೆನ್ನೂರು, ಆ.26- ನಗರದ ಜನತೆಗೆ ನಿರಂತರ ಕುಡಿಯುವ ನೀರು ಒದಗಿಸಲು ಕೈಗೊಳ್ಳಲಾದ ಮಹತ್ವದ ಯೋಜನೆ 24×7 ಕಾಮಗಾರಿಯು ಸಂಪೂರ್ಣ ಕಳಪೆಯಾಗಿದ್ದು, ಅದನ್ನು ಉದ್ಘಾಟಿಸಲು ಮುಖ್ಯಮಂತ್ರಿಗಳು ಆಗಮಿಸುತ್ತಿರುವುದು ದುರದೃಷ್ಟಕರ ಸಂಗತಿ ಎಂದು ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಹನುಮಂತಪ್ಪ ಕಬ್ಬಾರ ಇಂದು ಕರೆದಿದ್ದ ಮಾಧ್ಯಮ ಗೋಷ್ಠಿಯಲ್ಲಿ ವಿಷಾದಿಸಿದ್ದಾರೆ.

ಕರ್ನಾಟಕ ಏಕೀಕರಣದ ಹೋರಾಟಗಾರ, ಧೀಮಂತ ಪತ್ರಿಕೋದ್ಯಮಿ ಪಾಟೀಲ ಪುಟ್ಟಪ್ಪ ಅವರ ಸ್ಮಾರಕ ಮಾಡುವುದು ಸೇರಿದಂತೆ, ಕಳಪೆ ಕಾಮಗಾರಿಯ ಸಿಡಿಗಳು ಮತ್ತು ಇತರೆ ಬೇಡಿಕೆಗಳ ಮನವಿಯನ್ನು ನಾಡಿದ್ದು ದಿನಾಂಕ 28 ರಂದು ಆಗಮಿಸುವ ಮುಖ್ಯಮಂತ್ರಿಗಳಿಗೆ ಕೊಡುವುದಾಗಿ ಹನುಮಂತಪ್ಪ ಹೇಳಿದರು.

# ಹೊನ್ನಾಳಿ ಪುರಸಭೆ ಕ್ಷೇತ್ರ ವಿಂಗಡಣೆ ಅಂತಿಮ ಅಧಿಸೂಚನೆ ಪ್ರಕಟ

ದಾವಣಗೆರೆ, ಆ.26- ಹೊಸದಾಗಿ ರಚನೆಯಾಗಿರುವ ಹೊನ್ನಾಳಿ ಪುರಸಭೆಗೆ ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಣೆಯ ಅಂತಿಮ ಅಧಿಸೂಚನೆಯನ್ನು ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಜಿಲ್ಲಾಧಿಕಾರಿಗಳು ಇಂದು ಪ್ರಕಟಿಸಿ ದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ, ಹೊನ್ನಾಳಿ ಪುರಸಭೆ, ಹೊನ್ನಾಳಿ ತಹಶೀಲ್ದಾರ್‌ರ ಕಚೇರಿ ಯಲ್ಲಿ ಅಂತಿಮ ಅಧಿಸೂಚನೆ ಲಭ್ಯವಿದ್ದು, ಸಾರ್ವಜನಿಕರು ಈ ಕಚೇರಿ ಗಳಿಂದ ಪಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

# ಮಹಿಳೆಯರು ಮುಂಚೂಣಿಗೆ ಬಂದರೆ ದೇಶದ ಉದ್ಧಾರ

## ಹಿರಿಯ ವಕೀಲ ಎಲ್.ಎಚ್. ಅರುಣ ಕುಮಾರ್ ಅಭಿಮತ

ದಾವಣಗೆರೆ, ಆ.26 - ಈ ಸಮಾಜ, ಈಗಿನ ರಾಜಕಾರಣ ಸುಧಾರಣೆಯಾಗಬೇಕಿ ದ್ದರೆ, ದೇಶದ ಅಭಿವೃದ್ಧಿ ಆಗಬೇಕಿದ್ದರೆ ಮಹಿಳೆಯರು ಮುಂಚೂಣಿಗೆ ಬಂದರೆ ಮಾತ್ರ ಸಾಧ್ಯ ಎಂದು ಹಿರಿಯ ವಕೀಲ ಎಲ್. ಎಚ್. ಅರುಣ ಕುಮಾರ್ ಪ್ರತಿಪಾದಿಸಿದರು.

ಮುಸ್ಲಿಂ ಮಹಿಳೆಯರೇ ನಡೆಸುವ 'ಮೆಹನತ್' ಸಹಕಾರ ಬ್ಯಾಂಕ್‌ನ ನೂತನ ಕಚೇರಿಯನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಪುರುಷರಿಗೆ ಸಮಾನವಾಗಿ ಮಹಿಳೆಯರು ಪ್ರತಿಭೆಗಳನ್ನು ತೋರಿಸಿದ್ದಾರೆ. ಕೆಲವು ಕಡೆ ಪುರುಷರಿಗಿಂತ ಹೆಚ್ಚು ಪ್ರತಿಭಾವಂತರಿದ್ದಾರೆ ಎಂದು ಹೇಳಿದರೆ ತಪ್ಪೇನಿಲ್ಲ. ಆದರೆ ಸಾಮಾ ಜಿಕ, ರಾಜಕೀಯವಾಗಿ ಅವಕಾಶಗಳು ಸಿಗದೇ ವಂಚಿತರಾಗುತ್ತಿದ್ದಾರೆ ಎಂದು ವಿಷಾದಿಸಿದರು.

ದಾವಣಗೆರೆಯಲ್ಲಿ ಮಹಿಳೆಯರು ಅದರಲ್ಲೂ ಮುಸ್ಲಿಂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಂಘಟಿತರಾಗುತ್ತಿರುವುದು ಸಂತೋಷದ ವಿಚಾರ. ಪುರುಷರು ಯಾಕೋ ಹಿಂದೆ ಬೀಳುತ್ತಿದ್ದಾರೆ ಎಂದು ಅವರು ಹೇಳಿದರು.



ಹಿರಿಯ ವಕೀಲ ಅನೀಸ್ ಪಾಷ ಮಾತನಾಡಿ, ಸಾರ್ವಜನಿಕವಾದ ಎಲ್ಲ ಸಂಸ್ಥೆಗಳನ್ನು ಮಾರಾಟ ಮಾಡುವವರು ಅಧಿಕಾರದಲ್ಲಿದ್ದಾರೆ. ಕಾರು ತೆಗೆದುಕೊಳ್ಳುವಾಗಲೇ ರೋಡ್‌ಟ್ಯಾಕ್ಸ್ ಕಟ್ಟಿದ್ದರೂ ಮತ್ತೆ ಟೋಲ್ ಕಟ್ಟಿಸಿಕೊಳ್ಳುತ್ತಿದ್ದಾರೆ. ಖಾಸಗಿಯವರಿಗೆ ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿರುವ ಸರ್ಕಾರ ಇದೆ. ಮಾರಾಟ ವನ್ನು ವಿರೋಧಿಸಿ ಶೀಘ್ರದಲ್ಲಿ ಪಿಟಿಷನ್ ಹಾಕಲಾಗುವುದು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕ್ ಅಧ್ಯಕ್ಷರಾದ ಜಬೀನಾ ಖಾನಂ ಮಾತನಾಡಿ, 'ಬೀಡಿ ಕಟ್ಟುವ ಮಹಿಳೆಯರಿಗಾಗಿ ಇರುವ ನೆರಳು ಬೀಡಿ ಕಾರ್ಮಿಕರ ಯೂನಿಯನ್, ಬೀಡಿ ಕಟ್ಟದ ಮಹಿಳೆಯರಿಗಾಗಿ ಮುಸ್ಲಿಂ ಮಹಿಳಾ ಒಕ್ಕೂಟ, ಈ ಎಲ್ಲ ಮಹಿಳೆಯರಿಗೆ 'ಮೆಹನತ್' ಬ್ಯಾಂಕ್ ಇದೆ. ಅವೆಲ್ಲ ಬೇರೆ ಬೇರೆ ಕಡೆ ಕಾರ್ಯ ನಿರ್ವಹಿಸುತ್ತಿದ್ದವು. ಇನ್ನು ಮುಂದೆ ಒಂದೇ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲಿವೆ' ಎಂದು ತಿಳಿಸಿದರು.

ಯೂನಿಯನ್ ಕಾರ್ಯದರ್ಶಿ ಕರಿಬಸಪ್ಪ ಸ್ವಾಗತಿಸಿದರು. ಬಾಲಕೃಷ್ಣ, ನಾಜೀಮಾ ಬಾನು, ಹಸೀನಾ ಬಾನು ಉಪಸ್ಥಿತರಿದ್ದರು.

# ಗಣೇಶೋತ್ಸವಕ್ಕೆ ಅನುಮತಿ ನೀಡದಿದ್ದರೆ ಧರಣಿ

ದಾವಣಗೆರೆ, ಆ. 26- ಇದೇ ದಿನಾಂಕ 29ರೊಳಗೆ ಸಾರ್ವಜನಿಕ ಗಣೇಶೋತ್ಸವ ಆಚರಿಸಲು ಅನುಮತಿ ನೀಡದಿದ್ದರೆ 30ರಂದು ಬಿಜೆಪಿ ಶಾಸಕರ ಮನೆ ಹಾಗೂ ಕಚೇರಿ ಬಳಿ ಧರಣಿ ನಡೆಸಲಾಗುವುದು ಎಂದು ಶ್ರೀರಾಮ ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಹರೀಶ್ ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಕೊರೊನಾ ಆತಂಕದ ನಡುವೆಯೂ ಕೇಂದ್ರ ಸಚಿವರು ಜನಾಶೀರ್ವಾದ ಯಾತ್ರೆ ಮಾಡಿದ್ದಾರೆ. ಚಿತ್ರಮಂದಿರ, ಬಾರ್, ಮಾಲ್‌ಗಳು, ಶಾಲೆಗಳಿಗೆ ಅನುಮತಿ ನೀಡಿರುವ ಸರ್ಕಾರ ಕೋವಿಡ್ ನೆಪ ಹೇಳಿ ಸಾರ್ವಜನಿತ ಗಣೇಶೋತ್ಸವಕ್ಕೆ ನಿಷೇಧ ಹೇರಿರುವುದು ಸರಿಯಲ್ಲ ಎಂದು ಹೇಳಿದರು.

ಧಾರ್ಮಿಕ ಆಚರಣೆಗೆ ಚ್ಯುತಿ ಬಾರದಂತೆ, ಕೋವಿಡ್ ನಿಯಮ ಉಲ್ಲಂಘನೆಯಾಗದಂತೆ ಈಗಿರುವ ನಿರ್ಬಂಧ ತೆಗೆದು ಹಬ್ಬಕ್ಕೆ ಅನುಕೂಲವಾಗುವಂತೆ ಹೊಸ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದ ಅವರು, ಇಲ್ಲದಿದ್ದರೆ ಪ್ರಮೋದ್ ಮುತಾಲಿಕ್ ನೇತೃತ್ವದಲ್ಲಿ ಬಿಜೆಪಿ ಶಾಸಕರು ಹಾಗೂ ಸಚಿವರುಗಳ ಮನೆ ಹಾಗೂ ಕಚೇರಿ ಬಳಿ ಧರಣಿ ನಡೆಸಲಾಗುವುದು ಎಂದರು.

ರಾಜಕೀಯ ನಾಯಕರ ಕೈಗೊಂಬೆಗಳಾಗಿರುವ ಸ್ವಾಮೀಜಿಗಳು, ಮಠಾಧೀಶರು ಧಾರ್ಮಿಕ ಆಚರಣೆಗೆ ಅಡಚಣೆಯಾದಾಗ ಏಕೆ ಮಾತನಾಡುತ್ತಿಲ್ಲ ? ಹಿಂದೂ ಸಂಘಟನೆಗಳು ಮಾತ್ರ ಹಿಂದುತ್ವ ಕಾಪಾಡುವ ಕೆಲಸ ಮಾಡಬೇಕೇ? ಎಂದು ಪ್ರಶ್ನಿಸಿದ ಹರೀಶ್, ಗಣೇಶೋತ್ಸವಕ್ಕೆ ನಿರ್ಬಂಧ ವಿಧಿಸಿರುವ ಬಗ್ಗೆ ಎಲ್ಲಾ ಸ್ವಾಮೀಜಿಗಳು ದನಿ ಎತ್ತಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀರಾಮ ಸೇನಾ ರಾಜ್ಯ ಸಂಪರ್ಕ ಪ್ರಮುಖ್ ಪರಶುರಾಮ ನಡುಮನಿ, ಜಿಲ್ಲಾಧ್ಯಕ್ಷ ಮಣಿ ಸರ್ಕಾರ್, ಪ್ರಧಾನ ಕಾರ್ಯದರ್ಶಿ ಸಾಗರ್, ವಿನೋದ್ ರಾಜ್ ಡಿ.ಬಿ., ರಾಹುಲ್, ರಾಜು, ಅರುಣ್ ಕುಮಾರ್ ಇತರರು ಉಪಸ್ಥಿತರಿದ್ದರು.

# ರಾಜಕೀಯ ಮುಖಂಡರ ಪ್ರಕರಣಗಳ ತನಿಖೆಗೆ ವಿಶೇಷ ನ್ಯಾಯಾಲಯ : ಸುಪ್ರೀಂ

ನವದೆಹಲಿ ಆ. 26 – ರಾಜಕೀಯ ಮುಖಂಡರ ವಿರುದ್ಧದ ಸಿಬಿಐ ಪ್ರಕರಣಗಳಲ್ಲಿ ತನಿಖೆ ಹಾಗೂ ಶಿಕ್ಷೆ ಕಳಪೆಯಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ತ್ವರಿತ ವಿಚಾರಣೆಗಾಗಿ ಹೈಕೋರ್ಟ್‌ಗಳು ಹೆಚ್ಚುವರಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂದು ಸೂಚನೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠ ಈ ಬಗ್ಗೆ ಆದೇಶ ಹೊರಡಿಸಿದ್ದು, ಅಗತ್ಯವಿರುವ ಕಡೆಗಳಲ್ಲಿ ಹೆಚ್ಚುವರಿ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ತ್ವರಿತವಾಗಿ ವಿಚಾರಣೆ ನಡೆಸುವ ಜೊತೆಗೆ ಕೇಂದ್ರ, ಇಲ್ಲವೇ ರಾಜ್ಯ ಸರ್ಕಾರಗಳು ಈ ವಿಷಯದಲ್ಲಿ ಅಸಹಕಾರ ತೋರಿದರೆ ತನಗೆ ತಿಳಿಸಬೇಕೆಂದು ಹೇಳಿದೆ.

ಸಿಬಿಐ ವರದಿಯ ಪ್ರಕಾರ ಹಾಲಿ ಹಾಗೂ ಮಾಜಿ ಸಂಸದರನ್ನು ಒಳಗೊಂಡ 121 ಮತ್ತು ಹಾಲಿ ಹಾಗೂ ಮಾಜಿ ಶಾಸಕರಿಗೆ ಸಂಬಂಧಿಸಿದ 112 ಪ್ರಕರಣಗಳು ಬಾಕಿ ಇವೆ. ಇವುಗಳಲ್ಲಿ 37 ವಿಚಾರಣೆ ಹಂತದಲ್ಲಿವೆ. ಕೆಲ ಪ್ರಕರಣಗಳು ಕಳೆದ 20 ವರ್ಷಗಳಿಂದಲೂ ಬಾಕಿ ಇವೆ.

# ಬಿಜೆಪಿ ಕಚೇರಿಯಲ್ಲಿ ಮಂಗಳಗೌರಿ ಪೂಜೆ

ದಾವಣಗೆರೆ, ಆ.26- ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಂಗಳಗೌರಿ ಪೂಜೆ ಆಚರಿಸಲಾಯಿತು.

ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷರಾದ ಮಂಜುಳ ಮಹೇಶ್, ನಗರ ಪಾಲಿಕೆ ಸದಸ್ಯ ವೀಣಾ ನಂಜಪ್ಪ, ಪ್ರಧಾನ ಕಾರ್ಯದರ್ಶಿ ಪುಷ್ಪವಾಲಿ, ಭಾಗ್ಯ ಪಿಸಾಳೆ, ಸರ್ವಮಂಗಳ, ಜಯಲಕ್ಷ್ಮೀ, ಸರಸ್ವತಿ ಮತ್ತಿತರರು ಪೂಜೆಯಲ್ಲಿ ಉಪಸ್ಥಿತರಿದ್ದರು.

# ಉದ್ದು ಖರೀದಿಗೆ ಶೀಘ್ರವೇ ಆದೇಶದ ಸಾಧ್ಯತೆ

(1ನೇ ಪುಟದಿಂದ) ಹೊಸ ಕೃಷಿ ನೀತಿಗೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ ಬಗ್ಗೆ ಚರ್ಚೆ ನಡೆಸಲಾಯಿತು ಎಂದರು.

ರೈತರ ಮಕ್ಕಳಿಗಾಗಿ ರೈತ ವಿದ್ಯಾ ನಿಧಿ, ವಿದ್ಯಾರ್ಥಿ ವೇತನ ಯೋಜನೆಗಳನ್ನು ಉದ್ಘಾಟಿಸಲು ಕೇಂದ್ರ ಕೃಷಿ ಸಚಿವರು ಮುಂದಿನ ತಿಂಗಳ 5ನೇ ತಾರೀಖಿನಂದು ಬೆಂಗಳೂರಿಗೆ ಆಗಮಿಸಲಿದ್ದಾರೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಇದೇ ಸಂದರ್ಭದಲ್ಲಿ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿಯಾಗಿ ಸರ್ವೋಚ್ಛ ನ್ಯಾಯಾಲಯದಲ್ಲಿರುವ ಕೃಷ್ಣಾ ಮೇಲ್ದಂಡೆ ಯೋಜನೆ 3 ನೇ ಹಂತದ ಬಗ್ಗೆ ಚರ್ಚಿಸಲಾಯಿತು. ಬ್ರಿಜೇಶ್ ಕುಮಾರ್ ಮಿಶ್ರಾ ಟ್ರಿಬ್ಯೂ ನಲ್‌ನ ಅಧಿಸೂಚನೆ ಹೊರಡಿಸಲು ಕರ್ನಾಟಕ, ಮಹಾರಾಷ್ಟ್ರ ಒಟ್ಟಾಗಿ ಬೇಡಿಕೆ ಇಟ್ಟಿವೆ ಎಂದರು.

# ಹರಪನಹಳ್ಳಿ : ಗುಡಿಹಳ್ಳಿ ನಾಗರಾಜ್ ನಿಧನಕ್ಕೆ ಗಣ್ಯರ ಸಂತಾಪ



ಹರಪನಹಳ್ಳಿ, ಆ.26- ಹಿರಿಯ ಪತ್ರಕರ್ತ ಗುಡಿಹಳ್ಳಿ ನಾಗರಾಜ್ ನಿಧನಕ್ಕೆ ಸಂಸದ ವೈ. ದೇವೇಂದ್ರಪ್ಪ, ಎಂ.ಪಿ. ಪ್ರಕಾಶ್ ಸಮಾಜ ಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ, ಪುರಸಭೆ ಮಾಜಿ ಅಧ್ಯಕ್ಷ ಎಂ. ರಾಜಶೇಖರ್ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

ಸಮಸ್ತರು, ಸಂಪ್ರದಾಯ ಟ್ರಸ್ಟ್, ಆದರ್ಶ ಮಹಿಳಾ ಮಂಡಳಿ ಪರಶುರಾಮ ಹಾಗೂ ಕಲಾವಿದರು, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಶಶಿಧರ ಪೂಜಾರ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಾಮನಮಲಿ, ಕಸಾಪ ಮಾಜಿ ಅಧ್ಯಕ್ಷ ಬಿ. ರಾಮಪ್ರಸಾದ್ ಗಾಂಧಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿದ್ಧಲಿಂಗನಗೌಡ್ರು, ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಸವರಾಜ ಸಂಗಪ್ಪನವರ್, ಪ್ರಗತಿ ಪರ ಸಂಘಟನೆಯ ಹೊಸಹಳ್ಳಿ ಮಲ್ಲೇಶ್, ಗುಡಿಹಳ್ಳಿ ಹಾಲೇಶ್, ಸಾಹಿತಿ ಇಸ್ಮಾಯಿಲ್ ಎಲಿಗಾರ್, ಪಿ.ಬೆಟ್ಟನಗೌಡ್ರು, ಯರಬಳ್ಳಿ ಉಮಾಪತಿ, ಅರಸಿಕೇರಿ ಉಮೇಶ, ಹಬೀಬ್ ಸಾಬ್, ಪೂಜಾರ್ ಮರಿಯಪ್ಪ, ಪೂಜಾರ್ ಚಂದ್ರಪ್ಪ, ಮಂಜುನಾಥಗೌಡ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

# ಪತ್ರಕರ್ತ, ರಂಗಕರ್ಮಿ ಗುಡಿಹಳ್ಳಿ ನಾಗರಾಜ್ ನಿಧನ

**(1ನೇ ಪುಟದಿಂದ)** ನಾಳೆ ದಿನಾಂಕ 27ರ ಶುಕ್ರವಾರ ಬೆಳಿಗ್ಗೆ ಕೆರೆ ಗುಡಿಹಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ.

'ಪ್ರಜಾವಾಣಿ' ಪತ್ರಿಕೆಯ ವರದಿಗಾರರಾಗಿ, ಹಿರಿಯ ಸಹ ಸಂಪಾದಕರಾಗಿ ಸುಧೀರ್ಘ ಕಾಲ ಸೇವೆ ಸಲ್ಲಿಸಿದ್ದ ಅವರು, ನಿವೃತ್ತಿಯಾದ ನಂತರದ ದಿನಗಳಲ್ಲಿ ತಮ್ಮ ಸಂಪಾದಕತ್ವದಲ್ಲಿ 'ರಂಗ ನೇಪಥ್ಯ' ಪತ್ರಿಕೆಯನ್ನು ಆರಂಭಿಸಿದ್ದರು.

ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದ ಅವರು, ರಂಗಭೂಮಿಗೆ ವಿಶೇಷ ಕೊಡುಗೆ ನೀಡಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ, ಬೆಂಗಳೂರಿನ ಪ್ರೆಸ್ ಕ್ಲಬ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಪತ್ರಿಕೋದ್ಯಮ ಮತ್ತು ರಂಗಭೂಮಿ ಕ್ಷೇತ್ರಗಳಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ಗುಡಿಹಳ್ಳಿ ನಾಗರಾಜ್ ಅವರಿಗೆ ಕರ್ನಾಟಕ ಸರ್ಕಾರವು 'ಕರ್ನಾಟಕ ರಾಜ್ಯೋತ್ಸವ' ಪ್ರಶಸ್ತಿ, 'ನಾಟಕ ಅಕಾಡೆಮಿ' ಪ್ರಶಸ್ತಿ ನೀಡಿ, ಗೌರವಿಸಿತ್ತು.

**ಮುರುಘಾ ಶರಣರು :** ಗುಡಿಹಳ್ಳಿ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿರುವ ಚಿತ್ರದುರ್ಗ ಮುರುಘಾಮಠದ ಡಾ. ಶಿವಮೂರ್ತಿ ಮುರುಘಾ ಶರಣರು, ನಾಗರಾಜ್ ಅವರ ನಿಧನದಿಂದ ಉತ್ತಮ ರಂಗಕರ್ಮಿಯನ್ನು ಕಳೆದುಕೊಂಡು ರಂಗಭೂಮಿ ಬಡವಾಗಿದೆ ಎಂದಿದ್ದಾರೆ.

**ಸಾಣೇಹಳ್ಳಿ ಶ್ರೀಗಳು :** ಗುಡಿಹಳ್ಳಿ ನಾಗರಾಜ್ ನಿಧನಕ್ಕೆ ಸಂತಾಪ ಸೂಚಿಸಿರುವ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ರಂಗಭೂಮಿಯ ಒಲವಿನಿಂದಾಗಿ ಶಿವಸಂಚಾರದ ಭಾಗವೇ ಆಗಿದ್ದರು ಎಂದು ಹೇಳಿದ್ದಾರೆ.

**ಎಂ.ಎಸ್.ವಿಕಾಸ್ ಸಂತಾಪ :** ಗುಡಿಹಳ್ಳಿ ನಾಗರಾಜ್ ಅವರ ನಿಧನಕ್ಕೆ 'ಜನತಾವಾಣಿ' ಸಂಪಾದಕ ಎಂ.ಎಸ್.ವಿಕಾಸ್ ಅವರು ಶೋಕ ವ್ಯಕ್ತಪಡಿಸಿದ್ದಾರೆ. 'ಜನತಾವಾಣಿ'ಯೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದನ್ನು ಮೆಲುಕು ಹಾಕಿರುವ ವಿಕಾಸ್, ರಂಗಭೂಮಿಯ ಅನೇಕ ಕಲಾವಿದರನ್ನು ಪತ್ರಿಕೆಗಳ ಮೂಲಕ ನಾಡಿಗೆ ಪರಿಚಯಿಸುತ್ತಿದ್ದ ನಾಗರಾಜ್ ಅವರು ಪತ್ರಿಕೋದ್ಯಮಕ್ಕೆ ಸಲ್ಲಿಸಿರುವ ಸೇವೆಯನ್ನು ಶ್ಲಾಘಿಸಿದ್ದಾರೆ.

**ಡಾ. ಈಶ್ವರಪ್ಪ ಶೋಕ :** ಗುಡಿಹಳ್ಳಿ ನಾಗರಾಜ್ ನಿಧನಕ್ಕೆ ಸಂತಾಪ ಸೂಚಿಸಿರುವ ಜಾನಪದ ವಿದ್ವಾಂಸ ಡಾ. ಎಂ.ಜಿ.ಈಶ್ವರಪ್ಪ, ತಮ್ಮ ಆತ್ಮೀಯ ಒಡನಾಡಿಗಳೊಲ್ಲಬರಾಗಿದ್ದ ನಾಗರಾಜ್ ಅವರು, ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಸ್ಮರಣೀಯ ಎಂದು ಹೇಳಿದ್ದಾರೆ.

**ಪತ್ರಕರ್ತರ ಸಂಘ :** ಹಿರಿಯ ಪತ್ರಕರ್ತ ಗುಡಿಹಳ್ಳಿ ನಾಗರಾಜ್ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಭಾವಿ, ಪ್ರಧಾನ ಕಾರ್ಯದರ್ಶಿ ಇ. ಎಂ.ಮಂಜುನಾಥ, ಖಜಾಂಚಿ ಮಾಗನೂರು ಮಂಜಪ್ಪ, ರಾಜ್ಯ ಸಮಿತಿ ನಿರ್ದೇಶಕ ಕೆ.ಚಂದ್ರಣ್ಣ, ಹಿರಿಯ ಪತ್ರಕರ್ತರುಗಳಾದ ಪೆ.ನಾ.ಗೋಪಾಲ ರಾವ್, ವಿ.ಬಸವರಾಜಯ್ಯ, ಬಸವರಾಜ್ ಐರಣಿ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

**ಬಾ.ಮ. ಬಸವರಾಜಯ್ಯ :** ನಾಲ್ಕು ದಶಕಗಳ ಕಾಲ ಗುಡಿಹಳ್ಳಿ ನಾಗರಾಜ್ ಅವರೊಂದಿಗೆ ಗೆಳೆತನ ಹೊಂದಿದ್ದ ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಅವರು ನಾಗರಾಜ್ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ.

ನಾಗರಾಜ್ ಅವರೊಂದಿಗೆ ನಾಟಕ ಅಕಾಡೆಮಿಯಲ್ಲಿ ಜೊತೆಯಾಗಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದನ್ನು ಸ್ಮರಿಸಿರುವ ಬಾಮ, ನಾಗರಾಜ್ ಅವರ ಅಗಲಿಕೆಯಿಂದ ರಂಗಭೂಮಿ ಮತ್ತು ಪತ್ರಿಕಾರಂಗಕ್ಕೆ ತುಂಬಲಾರದ ಹಾನಿಯಾಗಿದೆ ಎಂದು ಹೇಳಿದ್ದಾರೆ.

**ಬಿ.ಎನ್.ಮಲ್ಲೇಶ್ :** ಹವ್ಯಾಸಿ ಮತ್ತು ವೃತ್ತಿ ರಂಗಭೂಮಿಯ ಬಗ್ಗೆ ಅಪಾರ ಅನುಭವ ಹೊಂದಿದ್ದ ಗುಡಿಹಳ್ಳಿ ನಾಗರಾಜ್ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿರುವ ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್ ಅವರು ತಮ್ಮೊಂದಿಗೆ ಗುಡಿಹಳ್ಳಿ ಹೊಂದಿದ್ದ ಆತ್ಮೀಯತೆಯನ್ನು ಮೆಲುಕು ಹಾಕಿದ್ದಾರೆ. ಜಿಲ್ಲೆಯಲ್ಲಿ ಬಂಡಾಯ ಸಂಘಟನೆಯನ್ನು ಸಂಘಟಿಸುವಲ್ಲಿ ಗುಡಿಹಳ್ಳಿ ಅವರು ತಮಗೆ ಸಹಕರಿಸಿದ್ದನ್ನು ಮಲ್ಲೇಶ್ ಸ್ಮರಿಸಿದ್ದಾರೆ.

**ಗಣ್ಯರು :** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್.ಮಂಜುನಾಥ್ ಕುರ್ಕಿ, ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ, ಹಿರಿಯ ಸಾಹಿತಿ ಮಲ್ಲಿಕಾರ್ಜುನ್ ಕಡಕೋಳ, ಬಸವಾಪಟ್ಟಣದ ಲೇಖಕ ಎಲ್.ಜಿ. ಮಧುಕುಮಾರ್ ಮತ್ತಿತರರು ನಾಗರಾಜ್ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

**ನಾಗರಾಜ ಸಿರಿಗೆರೆ ಸಂತಾಪ :** ಗುಡಿಹಳ್ಳಿ ನಾಗರಾಜ್ ಅವರ ನಿಧನದಿಂದ ಕನ್ನಡ ಸಾರಸ್ವತ ಲೋಕ ಬಡವಾಗಿದೆ ಎಂದು ಶೋಕ ವ್ಯಕ್ತಪಡಿಸಿರುವ ಕನ್ನಡ ಅಧ್ಯಾಪಕ - ಲೇಖಕ ನಾಗರಾಜ ಸಿರಿಗೆರೆ, ಪತ್ರಿಕೆಯ ಮೂಲಕ ಹಿರಿ - ಕಿರಿಯ ರಂಗಚೇತನಗಳ ಸಾಧನೆ ಸಿದ್ದಿಗಳನ್ನು ಅಕ್ಷರ ಲೋಕಕ್ಕೆ ಪರಿಚಯಿಸುತ್ತಿದ್ದ ಗುಡಿಹಳ್ಳಿ ಅವರ ಪರಿ ಅನನ್ಯವಾದುದು ಎಂದು ಹೇಳಿದ್ದಾರೆ.

# ನಿಮ್ಮಿಂದ ಕಾಂಗ್ರೆಸ್ ಪಕ್ಷಕ್ಕೆ ಮೋಸವಾಗಿದೆಯೋ... ಪಕ್ಷದಿಂದ ನಿಮಗೆ ಮೋಸವಾಗಿದೆಯೋ ಆತ್ಮಾವಲೋಕನ ಮಾಡಿಕೊಳ್ಳಿ

## ಓದುಗರ ಪತ್ರ

ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನೂತನವಾಗಿ ದೇವರಮನೆ ಶಿವಕುಮಾರ್ ಅವರು ಅಧ್ಯಕ್ಷರಾಗಿದ್ದಾರೆ. ಅವರಿಗೆ ಅಭಿನಂದನೆಗಳು. ಆದರೆ, ಅವರು ತಮ್ಮ ಪ್ರಥಮ ಪತ್ರಿಕಾಗೋಷ್ಠಿಯಲ್ಲಿ ತಾವು ಕಾಂಗ್ರೆಸ್ ಪಕ್ಷ ಬಿಟ್ಟು ಬಿಜೆಪಿ ಸೇರಿರುವ ಕಾರಣ ಎಲ್ಲರಿಗೂ ತಿಳಿದಿದೆ.

ಪಕ್ಷದಲ್ಲಿದ್ದಾಗ ಯಾವ ನೋವಿತ್ತು ಏನಿಲ್ಲಾ ಸಮಸ್ಯೆ ಅನುಭವಿಸಿದೆ ಎಂಬುದು ನನಗೆ ಮಾತ್ರ ಗೊತ್ತು ಎಂದು ತಿಳಿಸಿದ್ದೀರಾ. ಅಧಿಕಾರದ ಆಸೆಗಾಗಿ ಮೇಯರ್ ಚುನಾವಣೆಯ ಕೊನೆಯ ಕ್ಷಣದಲ್ಲಿ ರಾತ್ರೋರಾತ್ರಿ ಹೋದ ನೀವು, ಈ ಮಾತುಗಳನ್ನು ಹೇಳುವುದು ಎಷ್ಟು ಸರಿ.

ಮಹಾನಗರ ಪಾಲಿಕೆಯ 22ನೇ ವಾರ್ಡ್ ಯಲ್ಲಮ್ಮ ನಗರ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. ಅಲ್ಲಿ ಪಕ್ಷಕ್ಕಾಗಿ ದುಡಿದ ಅನೇಕ ನಾಯಕರುಗಳು ಇದ್ದರು. ಆದರೂ ನಮ್ಮ ಪಕ್ಷದ ಹೈಕಮಾಂಡ್ ಎಂದೂ ಕಾಂಗ್ರೆಸ್ ಪಕ್ಷಕ್ಕೆ ಕೆಲಸ ಮಾಡದ ನಿಮ್ಮನ್ನು ಕರೆತಂದು ಟಿಕೆಟ್ ನೀಡಿ, ಗೆಲ್ಲಿಸಿಕೊಂಡು ಬಂದದ್ದು, ಕಾಂಗ್ರೆಸ್ ಪಕ್ಷ ನಿಮಗೆ ಮಾಡಿದ ಮೋಸವಲ್ಲವೇ ?

ಮೂರ್ನಾಲ್ಕು ಬಾರಿ ಗೆದ್ದು, ಹತ್ತಾರು ವರ್ಷಗಳಿಂದ ಪಕ್ಷಕ್ಕಾಗಿ ದುಡಿದಂತಹ ಪಕ್ಷದ ಪಾಲಿಕೆಯ ಸದಸ್ಯರುಗಳು ಇದ್ದರೂ ಸಹ ಪ್ರಥಮ ಬಾರಿ ಗೆದ್ದಂಥಾ ನಿಮ್ಮನ್ನು ಮೇಯರ್ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದು ಕಾಂಗ್ರೆಸ್ ಪಕ್ಷ ನಿಮಗೆ ನೀಡಿದ ನೋವು ಅಲ್ಲವೇ ?

ಮೇಯರ್ ಚುನಾವಣೆಗೆ ಸಾಮಾನ್ಯ ವರ್ಗಕ್ಕೆ ಮೀಸಲಾತಿ ಎರಡು ಬಾರಿ ಬಂದಿದ್ದು, ಮುಂದೆ ಸಾಮಾನ್ಯ ವರ್ಗಕ್ಕೆ ಮೀಸಲಾತಿ ಬರುವುದಿಲ್ಲ ಎಂದು ಅರಿತು, ಟಿಕೆಟ್ ನೀಡಿದ ಪಕ್ಷಕ್ಕೆ, ಗೆಲ್ಲಿಸಿಕೊಂಡು ಬಂದಂತಹ ಮುಖಂಡರು, ಕಾರ್ಯಕರ್ತರುಗಳಿಗೆ ನೀವು ಮೋಸ - ನೋವು ಮಾಡಿರುವಿರಿ ವಿನಃ ಪಕ್ಷವಾಗಲೀ, ಪಕ್ಷದ ಮುಖಂಡರುಗಳಾಗಲೀ, ಕಾರ್ಯಕರ್ತರುಗಳಾಗಲೀ ಅಲ್ಲ ಎಂಬುದು ತಿಳಿಯಲಿ.

ಕಾಂಗ್ರೆಸ್ ಪಕ್ಷ ನಿಮಗೆ ಟಿಕೆಟ್ ನೀಡಿ, ಪಾಲಿಕೆ ಸದಸ್ಯರನ್ನಾಗಿ ಮಾಡಿದ ಕಾರಣದಿಂದಾಗಿಯೇ, ಇಂದು ನಿಮಗೆ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ಒಲಿದಿರುವುದು ಎಂಬುದನ್ನು ತಿಳಿದು ನಮ್ಮ ಪಕ್ಷದ ನಾಯಕರುಗಳ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ.

ಏನೇ ಆಗಲಿ ನೂತನವಾಗಿ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಆಯ್ಕೆಯಾದ ನಿಮಗೆ ಅಭಿನಂದನೆಗಳು.

**- ಕೆ.ಎಲ್.ಹರೀಶ್,** ಬಸಾಪುರ.
ನಿಮ್ಮನ್ನು ಮೇಯರ್ ಮಾಡಲು ಶ್ರಮವಹಿಸಿದ ಕಾರ್ಯಕರ್ತರಲ್ಲಿ ಒಬ್ಬ.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ : ಕರಾಸಾ/ದಾವಿ/ಸಂಚಾರ/ವಾಣಿಜ್ಯ/671/2021–22 ದಿನಾಂಕ : 26.08.2021

**"ಸಂಧಾನ ಪ್ರಕಟಣೆ ಸಂಖ್ಯೆ: 06/2021–22"**
(ಬಸ್ ನಿಲ್ದಾಣಗಳ ಹೊರ ಮತ್ತು ಒಳ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ) (ಮಾತುಕತೆಯ ಮೂಲಕ)

ಕ.ರಾ.ರ.ಸಾ.ನಿಗಮದ, ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ **ಹರಿಹರ (ಒಳ ಆವರಣ) ಮತ್ತು ಮಲೆಬೆನ್ನೂರು (ಹೊರ ಆವರಣ)** ಬಸ್ ನಿಲ್ದಾಣಗಳ, ಹೊರಭಾಗದಲ್ಲಿ ಯೂನಿಪೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳಿಗೆ ಹಾಗೂ ಒಳ ಆವರಣದಲ್ಲಿ ಸಿಸಿಟಿವಿ, ವಿಡಿಯೋ ವಾಲ್, ಗ್ಲೋಸೈನ್, ಪಿಲ್ಲರ್ ಬೋರ್ಡ್, ಪ್ಲಾಟ್ ಫಾರಂ ಬೋರ್ಡ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣಗಳ ಒಳ ಮತ್ತು ಹೊರ ಭಾಗದ ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಮಾತುಕತೆಯ ಮೂಲಕ ಸಂಧಾನ ಕರೆಯಲಾಗಿರುತ್ತದೆ. **ಸದರಿ ಸಂಧಾನ ದಸ್ತಾವೇಜುಗಳನ್ನು ನಿಗಮದ ವೆಬ್‌ಸೈಟ್ https://ksrtc.karnataka.gov.inನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು** ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ – 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು – 7760990461

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ

ವಾಸಾಸಂಇ/ಉನಿನ/ಎಲ್‌ಸಿ/1323/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಸಾರ್ವಜನಿಕ ಪ್ರಕಟಣೆ**

ದಾವಣಗೆರೆ ನಗರದ ಶ್ರೀ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, 11ನೇ ಅಡ್ಡ ರಸ್ತೆ, ಡೋರ್ ನಂ. 209ರಲ್ಲಿ ಬರತಕ್ಕ 40×60 ಅಳತೆಯ ವಾಸದ ಮನೆಯನ್ನು ಶ್ರೀಮತಿ ವನಮಾಲ, ಶ್ರೀ ಎಸ್.ಜೆ. ಚಂದ್ರಕಾಂತ, ಶ್ರೀಮತಿ ಎಸ್. ಜೆ. ಸವಿತಾ ಮತ್ತು ಶ್ರೀ ಎಸ್.ಜೆ. ಶಶಿಕಾಂತ ಇವರುಗಳಿಂದ ಮೇಲ್ಕಾಣಿಸಿದ ಸ್ಥಿರ ಸೊತ್ತನ್ನು ಖರೀದಿ ಮಾಡಿಕೊಂಡಿದ್ದು, ಕ್ರಯಪತ್ರವನ್ನು ರಿಜಿಸ್ಟರ್ ಮಾಡಿಸಿಕೊಳ್ಳುತ್ತಿದ್ದು, ಮೇಲ್ಕಂಡ ಸ್ವತ್ತಿನ ವಿಚಾರದಲ್ಲಿ ಯಾರದರೂ ಆಕ್ಷೇಪಣೆಗಳು, ತಂಟೆ-ತಕರಾರುಗಳು, ಹಕ್ಕುಗಳು ವಗೈರೆ ಇದ್ದಲ್ಲಿ ಪ್ರಕಟಣೆಯ ದಿನಾಂಕದಿಂದ 7 ದಿವಸದೊಳಗಾಗಿ ಲಿಖಿತವಾಗಿ ನಮಗೆ ಮಾಹಿತಿ ನೀಡಲು ಈ ಮೂಲಕ ತಿಳಿಸಲಾಗಿದೆ. ಇಲ್ಲವಾದಲ್ಲಿ ಯಾವುದೇ ತಂಟೆ-ತಕರಾರು ಇರುವುದಿಲ್ಲವೆಂದು ಭಾವಿಸಿ ನೋಂದಾಯಿಸಿಕೊಳ್ಳಲಾಗುವುದು. ಮುಂದೆ ಬರುವ ಯಾವುದೇ ತಕರಾರುಗಳಿಗೆ ನಾವು ಜವಾಬ್ದಾರರಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕ ಪ್ರಕಟಣೆ ನೀಡಿದೆ.

**ಷೆಡ್ಯೂಲ್ : ಪೂರ್ವಕ್ಕೆ :** ರಸ್ತೆ, **ಪಶ್ಚಿಮಕ್ಕೆ :** ಸೈಟ್ ನಂ. 219 & 220, **ಉತ್ತರಕ್ಕೆ :** ಸೈಟ್ ನಂ. 208, **ದಕ್ಷಿಣಕ್ಕೆ :** ಸೈಟ್ ನಂ. 210 ಈ ಮಧ್ಯದ ಸೊತ್ತು.

**ದಿನಾಂಕ : 25.08.2021**
**ಸ್ಥಳ : ದಾವಣಗೆರೆ.**

**ರವಿಚಂದ್ರ ಎ.**
**# 906/1, 'ಚಿರಂತನ' 2ನೇ ಹಂತ, ಶಕ್ತಿ ನಗರ, ಕಿತ್ತೂರು ಬಡಾವಣೆ, ದಾವಣಗೆರೆ - 577 004. ಮೊಬೈಲ್ ನಂ. 99000 83010**



**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ : ಕರಾಸಾ/ದಾವಿ/ಸಂಚಾರ/ವಾಣಿಜ್ಯ/670/2021–22 ದಿನಾಂಕ : 26.08.2021

**"ಸಂಧಾನ ಪ್ರಕಟಣೆ ಸಂಖ್ಯೆ: 05/2021–22"**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ **ಹರಿಹರ** ಬಸ್ ನಿಲ್ದಾಣದ ಜನರಲ್ ಸ್ಟಾಲ್–05 ಹಾಗೂ **ಮಲೆಬೆನ್ನೂರು** ಬಸ್ ನಿಲ್ದಾಣದ ಉಪಹಾರ ಗೃಹ ಇವುಗಳನ್ನು **ಸಂಧಾನ (ಮಾತುಕತೆ)ದ ಮೂಲಕ ಆಹ್ವಾನಿಸಲಾಗಿದೆ.**
ಮೇಲ್ಕಂಡ ಖಾಲಿಯಿರುವ / ಖಾಲಿಯಾಗಲಿರುವ ಶಾಶ್ವತ / ತೆರೆದ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನ ಆಹ್ವಾನಿಸಲಾಗಿದೆ.
**ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ https://ksrtc.karnataka.gov.in ನಲ್ಲಿ ದಿ: 26.08.2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು** ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ – 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು – 7760990461

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ

ವಾಸಾಸಂಇ/ಉನಿನ/ಎಲ್‌ಸಿ/1327/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಪ್ರಕಟಣೆ**

**ಕೆ.ಟಿ. ಕಿಶೋರ್‌ಕುಮಾರ್** ಬಿನ್ ಸಿ.ಕೆ. ತಮ್ಮಣ್ಣ, ಕುಮಾರ ಜ್ಯೂಯಲರ್ಸ್, # 661, ಮಂಡಿಪೇಟೆ, ದಾವಣಗೆರೆರವರಾದ ನಾನು, ಇದೇ ವಿಳಾಸದಲ್ಲಿ ಗಿರವಿ ಮತ್ತು ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದು, ಈ ಗಿರವಿ ಮತ್ತು ಲೇವಾದೇವಿ ವ್ಯವಹಾರವನ್ನು ದಿನಾಂಕ 25.08.2021ರಂದು ಮುಕ್ತಾಯ ಮಾಡಿರುತ್ತೇನೆ. ಯಾವುದೇ ವ್ಯವಹಾರಗಳು ಬಾಕಿ ಇದ್ದಲ್ಲಿ **ಮೊ. 8105119978**ಗೆ ಸಂಪರ್ಕಿಸಲು ಕೋರಲಾಗಿದೆ.

ಸಹಿ /- **ಕೆ.ಟಿ. ಕಿಶೋರ್‌ಕುಮಾರ್**



**WANTED**

**MANAGER MALE - 2 NOS**
(Qualification - B.Com) with computer knowledge

**SALES EXECUTIVE - 3 NOS**
(Experienced In Any Marketing Field)

CONTACT :
**SAMYAK PLY & HARDWARE**
251, P.B.ROAD, OPP OLD BUSTAND, DAVANGERE - 2.
MOBILE : 94486 58233



**ANVITH ENTERPRISES FINANCIAL ADVISOR®**
P.J. Extension Davanagere-577004.
ಕಳೆದ ಹತ್ತು ವರ್ಷಗಳಿಂದ ಉತ್ತಮ ಸಲಹೆ ಮತ್ತು ಮಾರ್ಗದರ್ಶನದೊಂದಿಗೆ


1. Where Should I Invest Amount to get good returns? Whether in Shares, Mutual Funds, Insurance, Gold, or In Real Assets? ಈ ಎಲ್ಲಾ ಗೊಂದಲಗಳಿಗೆ ಉತ್ತಮ ಮಾರ್ಗದರ್ಶನಕ್ಕಾಗಿ ಹಾಗೂ
2. ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು ಹಾಗೂ ಆರ್ಥಿಕವಾಗಿ ಸಬಲರಾಗಲು ಇನ್ನು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**(M) - 87926 73593**



**ಹಾರ್ದಿಕ ಅಭಿನಂದನೆಗಳು**

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ದಾವಣಗೆರೆ ಜಿಲ್ಲಾ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರೂ, ಮಾರ್ಗದರ್ಶಕರೂ ಆದ



**ಶ್ರೀ ದೇವರಮನೆ ಶಿವಕುಮಾರ್**
ಅವರಿಗೆ
ಹಾರ್ದಿಕ ಶುಭಾಶಯಗಳು.

ಟ್ರಸ್ಟಿಗಳು, ಅಧ್ಯಕ್ಷರು ಮತ್ತು ಸದಸ್ಯರು
ಮಹೇಶ್ವರ ಸ್ವಾಮಿ ಸೇವಾ ಸಮಿತಿ ಟ್ರಸ್ಟ್, ಬಸಾಪುರ.
ಶ್ರೀ ಗುರುಸಿದ್ದೇಶ್ವರ ಸ್ವಾಮಿ ಗದ್ದುಗೆ, ಸೇವಾ ಸಮಿತಿ
ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮಿ ಗದ್ದುಗೆ ಸೇವಾ ಸಮಿತಿ, ಬಸಾಪುರ, ದಾವಣಗೆರೆ.

## ಗುಂಡಿಸ್ವಾಮಿ ದೇವಸ್ಥಾನದಲ್ಲಿ ಮೂರ್ತಿ ಕಿತ್ತಿಟ್ಟ ಕಿಡಿಗೇಡಿಗಳು



ಹರಿಹರ, ಆ.26- ನಗರದ ಕೋಟೆ ಬಡಾವಣೆಯ ಓಂಕಾರ ಮಠದ ಪಕ್ಕದಲ್ಲಿ ಇರುವ ಗುಂಡಿಸ್ವಾಮಿ ದೇವಸ್ಥಾನದಲ್ಲಿ ಶಿವಲಿಂಗ ಮೂರ್ತಿಯನ್ನು ಕಿಡಿಗೇಡಿಗಳು ಮೂಲ ಸ್ಥಳದಿಂದ ತೆಗೆದು ಪಕ್ಕದಲ್ಲಿ ಇರಿಸಿರುವುದರಿಂದ ಸಾಕಷ್ಟು ಅನುಮಾನಗಳಿಗೆ ದಾರಿಯಾಗಿದೆ.

ಸ್ಥಳೀಯರಾದ ಅರ್ಚಕ ಶ್ರೀಧರ್ ಹೇಳುವ ಪ್ರಕಾರ ಈ ದೇವಸ್ಥಾನ ಪುರಾತನ ಕಾಲದ್ದಾಗಿದ್ದು, ನಿಧಿ ಇರಬಹುದು ಎಂದು ಯಾರೋ ಕಿಡಿಗೇಡಿಗಳು ಶಿವಲಿಂಗವನ್ನು ತೆಗೆಯಲು ಪ್ರಯತ್ನ ಮಾಡಿರಬಹುದು. ಆ ಸಮಯದಲ್ಲಿ ಯಾವುದೋ ವ್ಯಕ್ತಿಗಳನ್ನು ನೋಡಿ ಸ್ಥಳದಿಂದ ಕಾಲು ಕಿತ್ತಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ಘಟನಾ ಸ್ಥಳಕ್ಕೆ ನಗರ ಠಾಣೆಯ ಪಿಎಸ್‌ಐ ಸುನೀಲ್ ಬಸವರಾಜ್ ಭೇಟಿ ನೀಡಿ ಈ ಕೃತ್ಯವನ್ನು ಮದ್ಯಪಾನ ಮಾಡಿರುವ ವ್ಯಕ್ತಿಗಳು ಮಾಡಿರಬಹುದು ಎಂದು ಅನುಮಾನಿಸಲಾಗಿದೆ. ಹೆಚ್ಚಿನ ವಿಚಾರಗಳ ಬಗ್ಗೆ ತನಿಖೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ದೇವರಾಜ್, ಮಂಜುನಾಥ್, ನಾಗರಾಜ್, ಸತೀಶ್ ಕುಮಾರ್ ಹಾಗು ಇತರರು ಹಾಜರಿದ್ದರು.

# ನ್ಯುಮೋನಿಯಾ: ಸೆಪ್ಟೆಂಬರ್ ಮೊದಲ ವಾರದಿಂದ ಪಿಸಿವಿ ಲಸಿಕೆ

ದಾವಣಗೆರೆ ಆ. 26- ಮಕ್ಕಳಲ್ಲಿ ಕಂಡುಬರುವ ನ್ಯುಮೋನಿಯಾ, ನ್ಯುಮೋಕಾಕಲ್ ಹಾಗೂ ಇತರೆ ರೋಗಗಳಿಂದ ರಕ್ಷಣೆ ನೀಡುವಂತಹ ಪಿಸಿವಿ (ನ್ಯುಮ್ಯೋಕಾಕಲ್ ಕಾಂಜುಗೇಟ್ ವ್ಯಾಕ್ಸಿನ್) ನೂತನ ಲಸಿಕೆಯನ್ನು ಉಚಿತವಾಗಿ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಬರುವ ಸೆಪ್ಟೆಂಬರ್ ಮೊದಲ ವಾರದಲ್ಲಿ ಹಾಕಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನೂತನ ಲಸಿಕೆ ಹಾಕುವ ಕುರಿತು ಇಂದು ಕರೆಯಲಾಗಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ನೂತನ ಲಸಿಕೆಯನ್ನು 3 ಡೋಸ್ ನಲ್ಲಿ ನೀಡುವ ಕಾರ್ಯಕ್ರಮ ಪ್ರಾರಂಭಿಸುವಂತೆ ಸೂಚನೆ ನೀಡಿದೆ. ಈಗಾಗಲೇ ಈ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದ್ದು, ಪ್ರತಿ ಡೋಸ್‌ಗೆ ಸುಮಾರು 2 ರಿಂದ 4 ಸಾವಿರ ರೂ. ಗಳನ್ನು ನೀಡಿ ಪಾಲಕರು ತಮ್ಮ ಮಕ್ಕಳಿಗೆ ಹಾಕಿಸುತ್ತಿದ್ದಾರೆ. ಇದೀಗ ಸರ್ಕಾರ ಈ ಪಿಸಿವಿ ಲಸಿಕೆಯನ್ನು ಉಚಿತವಾಗಿ ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಗಳಡಿ ನೀಡಲು ತೀರ್ಮಾನಿಸಿ, ಲಸಿಕೆಯನ್ನು ಜಿಲ್ಲೆಗೆ ಪೂರೈಕೆ ಮಾಡಿದೆ.



ನ್ಯುಮೊಕಾಕಲ್ ನ್ಯುಮೋನಿಯಾ ಒಂದು ಶ್ವಾಸಕೋಶದ ಸೋಂಕಾಗಿದ್ದು, ಇದು ತೀವ್ರ ಸ್ವರೂಪ ಪಡೆದಲ್ಲಿ ಮರಣವೂ ಸಂಭವಿಸಬಹುದು. ಪಿಸಿವಿ ಲಸಿಕೆ ಡೋಸ್ ಅನ್ನು 6 ವಾರ, 14 ವಾರದ ಮಗುವಿಗೆ ನೀಡಲಾಗುತ್ತದೆ. 9 ತಿಂಗಳ ಮಗುವಿಗೆ ಬೂಸ್ಟರ್ ಡೋಸ್ ನೀಡಲಾಗುತ್ತದೆ, ಹೀಗೆ ಪ್ರತಿ ಮಗುವಿಗೆ ಒಟ್ಟು 3 ಡೋಸ್ ಪಿಸಿವಿ ಲಸಿಕೆ ನೀಡಲಾಗುತ್ತದೆ ಎಂದರು.

ಬಳ್ಳಾರಿ ವಿಭಾಗದ ಸರ್ವೇಲೆನ್ಸ್ ಮೆಡಿಕಲ್ ಆಫೀಸರ್ ಡಾ. ಶ್ರೀಧರ್ ಅವರು ಪಿಸಿವಿ ನೂತನ ಲಸಿಕೆ ಕುರಿತು ಮಾಹಿತಿ ನೀಡಿ, ಪಿಸಿವಿ ಲಸಿಕೆ ಈಗಾಗಲೇ ಜಗತ್ತಿನ 146 ದೇಶಗಳಲ್ಲಿ 2000 ನೇ ವರ್ಷದಿಂದಲೇ ಬಳಕೆಯಾಗುತ್ತಿದ್ದು, ಭಾರತದಲ್ಲಿ 2017 ರಿಂದ ಹಿಮಾಚಲ ಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ, ಮಧ್ಯಪ್ರದೇಶ ಹಾಗೂ ಬಿಹಾರ ರಾಜ್ಯಗಳಲ್ಲಿ ಬಳಕೆಯಾಗುತ್ತಿದ್ದು, ಕರ್ನಾಟಕದಲ್ಲಿ ಈ ವರ್ಷದಿಂದ ಪ್ರಾರಂಭಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನ್ಯುಮೋಕಾಕಲ್ ಸೋಂಕು ತಗುಲಿದ ಮಗುವಿಗೆ ಉಸಿರಾಡಲು ಕಷ್ಟವಾಗಿ, ಪಕ್ಕೆ ಸೆಳೆತ, ಜ್ವರ, ಕೆಮ್ಮು ಮತ್ತು ಇತರೆ ಸಮಸ್ಯೆಗಳು ಕಂಡುಬರುತ್ತವೆ. ಇದು ತೀವ್ರ ಸ್ವರೂಪ ಪಡೆದಲ್ಲಿ ಮರಣವೂ ಸಂಭವಿಸಬಹುದು. ಇದು ಕೆಮ್ಮಿದಾಗ ಅಥವಾ ಸೀನಿದಾಗ ಸಿಡಿಯುವ ತುಂತುರುಗಳ ಮೂಲಕ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ.

ರಾಜ್ಯದಲ್ಲಿ 2018 ರಲ್ಲಿ ನ್ಯುಮೋನಿಯಾ ರೋಗದಿಂದ ಸುಮಾರು 1.27 ಲಕ್ಷ ಮಕ್ಕಳು ಮೃತಪಟ್ಟಿರುವ ಬಗ್ಗೆ ವರದಿಯಾಗಿದೆ. ಈ ನ್ಯುಮೋಕಾಕಲ್ ರೋಗ 2 ರಿಂದ 5 ವರ್ಷದೊಳಗಿನ ಮಕ್ಕಳ ಮೇಲೆ ಹೆಚ್ಚು ಗಂಭೀರ ಪರಿಣಾಮ ಬೀರುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಮಾತನಾಡಿ, ಪಿಸಿವಿ ನೂತನ ಲಸಿಕೆ ಕುರಿತಂತೆ ಎಲ್ಲ ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳಲ್ಲಿ ಬರುವ ತಾಯಂದಿರಿಗೆ ಮಾಹಿತಿ ನೀಡಬೇಕು. ಆಶಾ ಕಾರ್ಯಕರ್ತರು ಕೂಡ ತಾಯಂದಿರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ ಮಾತನಾಡಿದರು. ಸಭೆಯಲ್ಲಿ ಜಿ.ಪಂ. ಉಪಕಾರ್ಯದರ್ಶಿ ಆನಂದ್, ಡಿಹೆಚ್‌ಒ ಡಾ. ನಾಗರಾಜ್, ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಡಾ. ಶಶಿಧರ್, ಡಾ. ರೇಣುಕಾರಾಧ್ಯ, ಟಿಹೆಚ್‌ಒ ಡಾ. ಎಲ್.ಡಿ. ವೆಂಕಟೇಶ್ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

## ಅಕ್ಟೋಬರ್ ಮೊದಲ ವಾರದಲ್ಲಿ ಜೈಡಸ್ ಲಸಿಕೆ

ನವದೆಹಲಿ, ಆ. 26 – ಜೈಡಸ್ ಕ್ಯಾಡಿಲಾದ ಜೈಕೊವ್-ಡಿ ಲಸಿಕೆ ಅಕ್ಟೋಬರ್ ಮೊದಲ ವಾರದಲ್ಲಿ ಲಭ್ಯವಾಗುವ ನಿರೀಕ್ಷೆ ಇದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಲಸಿಕೆಯನ್ನು 12-18 ವರ್ಷದ ವರಿಗೆ ನೀಡಬಹುದು. ಆದರೆ, ಸಹ ಅಸ್ವಸ್ಥತೆಯ ಮಕ್ಕಳಿಗೆ ಆದ್ಯತೆಯ ಮೇಲೆ ಲಸಿಕೆ ನೀಡುವ ಬಗ್ಗೆ ಇನ್ನೂ ಯಾವುದೇ ನಿರ್ಧಾರ ತೆಗೆದು ಕೊಂಡಿಲ್ಲ ಎಂದು ಸರ್ಕಾರ ತಿಳಿಸಿದೆ.

## ಯಾಹೂ ಸುದ್ದಿ ಜಾಲತಾಣ ಬಂದ್

ನವದೆಹಲಿ, ಆ. 26 - ನೂತನ ವಿದೇಶಿ ನೇರ ಹೂಡಿಕೆ ನಿಯಮಗಳ ಹಿನ್ನೆಲೆಯಲ್ಲಿ ಯಾಹೂ ತನ್ನ ಭಾರತೀಯ ಸುದ್ದಿ ವೆಬ್ ತಾಣಗಳನ್ನು ಮುಚ್ಚಿದೆ. ನೂತನ ನಿಯಮಗಳ ಅನ್ವಯ ಮಾಧ್ಯಮ ಕಂಪನಿಗಳಲ್ಲಿ ವಿದೇಶಿಯರು ಹೊಂದಿರುವ ಪಾತ್ರವನ್ನು ಸೀಮಿತ ಗೊಳಿಸಲಾಗಿದೆ. ಯಾಹೂ ನ್ಯೂಸ್, ಯಾಹೂ ಕ್ರಿಕೆಟ್, ಹಣಕಾಸು, ಮತ್ತಿತರೆ ತಾಣಗಳನ್ನು ಮುಚ್ಚಲಾಗಿದೆ. ಆದರೆ, ಯಾಹೂ ಇ-ಮೇಲ್ ಹಾಗೂ ಶೋಧ ಸೇವೆಗಳು ಮುಂದುವರೆಯಲಿವೆ.

## ಜಿಲ್ಲೆಯಲ್ಲಿ 12 ಪಾಸಿಟಿವ್ 14 ಗುಣಮುಖ

ದಾವಣಗೆರೆ, ಆ.26- ಜಿಲ್ಲೆಯಲ್ಲಿ ಗುರುವಾರ 12 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 14 ಜನ ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿಯೇ 12 ಜನರಿಗೆ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 230 ಸಕ್ರಿಯ ಪ್ರಕರಣಗಳಿವೆ.

ಕಳೆದೊಂದು ವಾರದ ಅಂಕಿ-ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಪಾಸಿಟಿವಿ ದರ ಶೇ.0.60ರಷ್ಟಿದೆ. ಮರಣ ಪ್ರಮಾಣ ಶೇ.1.12ರಷ್ಟಿದೆ.

# ಕೇರಳ: ನಿರ್ಲಕ್ಷ್ಯದಿಂದ ಕೊರೊನಾ ಉಲ್ಬಣ

ತಿರುವನಂತಪುರಂ, ಆ. 26 - ಕೇರಳದಲ್ಲಿ ಸತತ ಎರಡು ದಿನಗಳಿಂದ 30 ಸಾವಿರಕ್ಕೂ ಹೆಚ್ಚು ಕೊರೊನಾ ಪ್ರಕರಣಗಳು ಪತ್ತೆಯಾಗುತ್ತಿದ್ದು, ಪ್ರತಿಪಕ್ಷಗಳು ಹಾಗೂ ಆರೋಗ್ಯ ಪರಿಣಿತರು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದು ಕೊಂಡಿದ್ದಾರೆ. ಕೇರಳದ ಕೊರೊನಾ ಪ್ರಕರಣಗಳ ಪಾಲು ಇಡೀ ದೇಶದಲ್ಲಿ ಶೇ.70ಕ್ಕೂ ಹೆಚ್ಚಾಗಿದೆ.

ಬುಧವಾರ ಕೇರಳದಲ್ಲಿ 31,445 ಸೋಂಕಿತರು ಪತ್ತೆಯಾಗಿದ್ದರು. ಇಡೀ ದೇಶದಲ್ಲಿ 46,164 ಸೋಂಕಿತರು ಕಂಡು ಬಂದಿದ್ದರು. ಕೊರೊನಾ ಟೆಸ್ಟ್‌ನಲ್ಲಿ ಸೋಂಕಿತರು ಕಂಡುಬರುವ ಪ್ರಮಾಣ ಶೇ.19.95 ಆಗಿದೆ.

ಗುರುವಾರ ಸಹ 30,007 ಸೋಂಕಿತರು ಕಂಡು ಬಂದಿದ್ದಾರೆ ಹಾಗೂ 162 ಜನ ಸಾವನ್ನಪ್ಪಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಸಚಿವ ವಿ. ಮುರಳೀಧರನ್, ಕೇರಳ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಸೋಂಕು ಏರಿಕೆಯಾಗಿದೆ. ಕೊರೊನಾ ನಿರ್ವಹಣೆಯ ಬದಲು ಮೋಪ್ಲಾ ಗಲಭೆಗಳ ವರ್ಷಾಚರಣೆಯಲ್ಲಿ ಸರ್ಕಾರ ತೊಡಗಿತ್ತು ಎಂದವರು ಹೇಳಿದ್ದಾರೆ.

ಇದೇ ರೀತಿಯ ಹೇಳಿಕೆ ನೀಡಿರುವ ಕಾಂಗ್ರೆಸ್ ಶಾಸಕ ರಮೇಶ್ ಚೆನ್ನಿತಲ, ಸರ್ಕಾರ ಕೊರೊನಾ ಹರಡುವಿಕೆ ತಡೆಯಲು ವಿಫಲವಾಗಿದೆ. ಸರ್ಕಾರದ ನಿರ್ಲಕ್ಷದಿಂದ ಸೋಂಕು ಹೆಚ್ಚಾಗಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

### ಪ್ರತಿಪಕ್ಷಗಳು, ಆರೋಗ್ಯ ಪರಿಣಿತರ ತರಾಟೆ

ಕೋವಿಡ್ ನಿರ್ವಹಣೆಗೆ ಸ್ಪಷ್ಟ ಮಾರ್ಗ ಸೂಚಿ ಇಲ್ಲದೇ ಇರುವುದೇ ಕೇರಳದಲ್ಲಿ ಸಮಸ್ಯೆ ಉಲ್ಬಣಿಸಲು ಕಾರಣ ಎಂದಿರುವ ಆರೋಗ್ಯ ಪರಿಣಿತ ಡಾ. ಎಸ್.ಎಸ್. ಲಾಲ್, ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ವೈಜ್ಞಾನಿಕ ಸಮುದಾಯವನ್ನು ದೂರ ಇಡಲಾಗಿದೆ. ಅಧಿಕಾರಶಾಹಿ ಹಂತದಲ್ಲಿ ಮೂರ್ಖತನದ ನಿರ್ಧಾರ ತೆಗೆದುಕೊಳ್ಳುತ್ತಿರುವುದು ರೋಗ ವೇಗವಾಗಿ ಹರಡುವಂತೆ ಮಾಡುತ್ತಿದೆ ಎಂದಿದ್ದಾರೆ.

ಸರ್ಕಾರ ಕೊರೊನಾ ಕುರಿತ ಮಾಹಿತಿಯನ್ನು ಮುಚ್ಚಿಡುತ್ತಿದೆ. ನಾವು ಕೊರೊನಾದ ನೈಜ ಪರಿಸ್ಥಿತಿ ವಿಶ್ಲೇಷಿಸಲು ಸಾಧ್ಯವಾಗುತ್ತಿಲ್ಲ. ಯಾವ ವಯೋಮಾನದವರ ಮೇಲೆ ಕೊರೊನಾ ಹೆಚ್ಚು ಪರಿಣಾಮ ಬೀರುತ್ತಿದೆ ಎಂಬ ಮೂಲಭೂತ ಮಾಹಿತಿಯನ್ನೂ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಲಾಲ್ ತಿಳಿಸಿದ್ದಾರೆ.

ಜನರು ಕೊರೊನಾ ಮಾರ್ಗಸೂಚಿ ಪಾಲಿಸದೇ ಇರುವುದು ಸೋಂಕು ಉಲ್ಬಣಿಸಲು ಕಾರಣ ಎಂದು ಸಾರ್ವಜನಿಕ ಆರೋಗ್ಯ ಪರಿಣಿತ ಡಾ. ಅಮ್ರಾನ್ ಘಟಲ್ ಹೇಳಿದ್ದಾರೆ.

ರಾಜ್ಯ ಸರ್ಕಾರ ಜುಲೈ 27ರಂದು ಬಕ್ರೀದ್ ಆಚರಣೆಗಾಗಿ ನಿರ್ಬಂಧಗಳನ್ನು ಕೆಲ ದಿನಗಳ ಕಾಲ ಸಡಿಲಿಸಿತ್ತು. ಆ ಸಂದರ್ಭದಲ್ಲಿ ಕೇರಳದಲ್ಲಿ ಪ್ರತಿದಿನ 20 ಸಾವಿರದಷ್ಟು ಸೋಂಕಿತು ಕಂಡು ಬರುತ್ತಿತ್ತು. ಬಕ್ರೀದ್‌ಗೆ ನಿರ್ಬಂಧ ಸಡಿಲಿಸಿದ್ದನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತಾದರೂ, ರಾಜ್ಯ ಕ್ರಮವನ್ನು ತಡೆದಿರಲಿಲ್ಲ.

ಪ್ರತಿದಿನ 20 ಸಾವಿರದಷ್ಟು ಪ್ರಕರಣಗಳು ಕಂಡು ಬರುತ್ತಿರುವ ಸಂದರ್ಭದಲ್ಲೇ ರಾಜ್ಯ ಸರ್ಕಾರ ಅಂಗಡಿ, ಮಾರುಕಟ್ಟೆ, ಬ್ಯಾಂಕ್ ಮತ್ತಿತರೆ ಸಾರ್ವಜನಿಕ ಸ್ಥಳಗಳ ಮೇಲಿನ ನಿರ್ಬಂಧ ತೆರವುಗೊಳಿಸಿತ್ತು.

## ತಾರೇಹಳ್ಳಿಯಲ್ಲಿ ಇಂದು ವೀರಾಂಜನೇಯ ಸ್ವಾಮಿ ಪ್ರತಿಷ್ಠಾಪನಾ ಮಹೋತ್ಸವ



ಜಗಳೂರು ತಾಲ್ಲೂಕಿನ ತಾರೇಹಳ್ಳಿ ಗ್ರಾಮದಲ್ಲಿ ಇಂದು ಶ್ರೀ ವೀರಾಂಜನೇಯ ಸ್ವಾಮಿ ಪ್ರತಿಷ್ಠಾಪನೆ ನಡೆಯಲಿದೆ. ಬೆಳಿಗ್ಗೆ 6 ಕ್ಕೆ ಮೂಲಮಂತ್ರ ಹೋಮ, 7ಕ್ಕೆ ನೇತ್ರೋನ್ಮೀಲನ, ಪ್ರಾಣಪ್ರತಿಷ್ಠಾಪನೆ 108 ಕಳಾಸಾಭಿಷೇಕ, 8.30ಕ್ಕೆ ಶ್ರೀ ಸ್ವಾಮಿಗೆ ಮಹಾ ಪೂಜೆ, ಪ್ರಸಾದ ವಿತರಣೆ ಹಮ್ಮಿಕೊಳ್ಳಲಾಗಿದೆ. ಸುತ್ತ ಮುತ್ತ ಗ್ರಾಮಸ್ಥರು ಆಗಮಿಸಬೇಕೆಂದು ಕೋರಿದೆ

## ಆಫ್ಘಾನ್ ಸ್ಫೋಟಗಳಲ್ಲಿ 60ಕ್ಕೂ ಹೆಚ್ಚು ಸಾವು

ವಾಷಿಂಗ್ಟನ್, ಆ. 26 – ಆಫ್ಘಾನಿಸ್ತಾನದ ಕಾಬುಲ್ ವಿಮಾನ ನಿಲ್ದಾಣದ ಗೇಟ್ ಬಳಿಯಲ್ಲಿ ನಿಂತಿದ್ದ ಜನರ ಮೇಲೆ ಕನಿಷ್ಠ ಎರಡು ಆತ್ಮಹತ್ಯಾ ಬಾಂಬ್ ದಾಳಿ ನಡೆಸಲಾಗಿದ್ದು, 60ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಮೃತರಲ್ಲಿ ಅಮೆರಿಕದ ನಾಲ್ವರು ಸೈನಿಕರೂ ಸೇರಿದ್ದಾರೆ.

ತಾಲಿಬಾನ್ ಆಫ್ಘಾನಿಸ್ತಾನವನ್ನು ವಶಪಡಿಸಿಕೊಂಡ ನಂತರ, ಸಾವಿರಾರು ಜನರು ಅಲ್ಲಿಂದ ಹೊರ ಹೋಗಲು ಪ್ರಯತ್ನ ನಡೆಸಿದ್ದಾರೆ. ಸ್ಫೋಟಕ್ಕೆ ಯಾರು ಕಾರಣ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇಸ್ಲಾಮಿಕ್ ಸ್ಟೇಟ್‌ನ ಆಫ್ಘಾನ್ ಸಂಘಟನೆಯಾದ ಐಸಿಸ್ ಖೊರೊಸೊನಾ ದಾಳಿ ನಡೆಸಿರಬಹುದು ಎಂದು ಶಂಕಿಸಲಾಗುತ್ತಿದೆ. ಸಂಘಟನೆ ವಿದೇಶಿ ಪಡೆಗಳು ಹಾಗೂ ತಾಲಿಬಾನ್ ಎರಡನ್ನೂ ವಿರೋಧಿಸುತ್ತಿದೆ. ಆಫ್ಘಾನ್‌ನಲ್ಲಿ ತನ್ನ ಗೆಲುವು ಶಾಂತಿ ತರಲಿದೆ ಎಂದು ತಾಲಿಬಾನ್ ಭಾವಿಸಿತ್ತು. ಈ ಸ್ಫೋಟ ಹೊಸ ಸಮಸ್ಯೆಗಳನ್ನು ತಂದಿದೆ.




## ಕಸಾಪ ಜನ ಸಾಮಾನ್ಯರ ಪರಿಷತ್ ಮಾಡಲಾಗುವುದು: ಮಹೇಶ ಜೋಶಿ



ದಾವಣಗೆರೆ, ಆ. 26- ಕನ್ನಡ ಸಾಹಿತ್ಯ ಪರಿಷತ್ತನ್ನು ಜನ ಸಾಮಾನ್ಯರ ಪರಿಷತ್ ಮಾಡುವುದಾಗಿ ಕ.ಸಾ.ಪ. ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ ನಾಡೋಜ ಡಾ.ಮಹೇಶ ಜೋಶಿ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸ್ಪರ್ಧಿಸಿರುವ 21 ಅಭ್ಯರ್ಥಿಗಳ ಪೈಕಿ ತಾವೂ ಒಬ್ಬರಾಗಿದ್ದು, ಗೆಲುವು ತಮ್ಮದಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ತಮ್ಮ ಅವಧಿಯಲ್ಲಿ ಒಂದೂ ಕನ್ನಡ ಶಾಲೆಯನ್ನು ಮುಚ್ಚಲು ಬಿಡುವುದಿಲ್ಲ. ಹೋಬಳಿ, ತಾಲ್ಲೂಕು ಮಟ್ಟದಲ್ಲೂ ಪಾರದರ್ಶಕವಾಗಿ ಚುನಾವಣೆ ನಡೆಯಲು ಕ್ರಮ ಕೈಗೊಳ್ಳಲಾಗುವುದು. ಯುವಕರಿಗೆ ಹಾಗೂ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ತಮ್ಮ ಪ್ರಣಾಳಿಕೆಯಲ್ಲಿನ ವಿಷಯಗಳ ಬಗ್ಗೆ ಹೇಳಿದರು.

ಹಿಂದಿನ ಕ.ಸಾ.ಪ. ಅಧ್ಯಕ್ಷ ಮನು ಬಳಿಗಾರ ಸೇರಿದಂತೆ ಅನೇಕ ಸದಸ್ಯರು ವಿಳಾಸ ಬದಲಿಸಿಕೊಂಡಿಲ್ಲ. ಕೆಲವರು ಮರಣ ಹೊಂದಿದ್ದರೂ ಸದಸ್ಯರಾಗಿಯೇ ಉಳಿದಿದ್ದಾರೆ. ತಾವು ಗೆದ್ದ ನಂತರ ಕ.ಸಾ.ಪ.ಗೆ ಸಂಬಂಧಿಸಿದಂತೆ ಆಪ್ ರಚಿಸಿ, ಆ ಮೂಲಕ ನೂತನ ಸದಸ್ಯತ್ವ ಸೇರ್ಪಡೆ, ಸದಸ್ಯರ ವಿಳಾಸ ತಿದ್ದುಪಡಿ, ಹೆಸರು ತೆಗೆದು ಹಾಕುವಿಕೆ ಸೇರಿದ ವಿಷಯಗಳು ಸುಲಭವಾಗುವಂತೆ ಮಾಡಲಾಗುವುದು ಎಂದರು.

ಜಿಲ್ಲೆಯಲ್ಲಿ ಕಳೆದ ಬಾರಿ ಶೇ.59.7ರಷ್ಟು ಮಾತ್ರ ಮತದಾನವಾಗಿದೆ. ಕಳೆದ ಬಾರಿಗಿಂತ ಈ ವರ್ಷ 3 ಸಾವಿರ ಮತದಾರರು ಹೆಚ್ಚಾಗಿದ್ದು, ಈ ಬಾರಿ ಹೆಚ್ಚಿನ ಮತದಾನವಾಗುವ ನಿರೀಕ್ಷೆ ಇದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಿವೃತ್ತ ನ್ಯಾಯಾಧೀಶರಾದ ಅರಳಿ ನಾಗರಾಜ್, ಸದಾಶಿವಪ್ಪ ಶ್ಯಾಗಲೆ, ಸುಭಾಶ್ಚಂದ್ರ ಬೋಸ್, ಸಾಲಿಗ್ರಾಮ ಗಣೇಶ್ ಶೆಣೈ, ರಾಜಶೇಖರ ಗುಂಡಗತ್ತಿ, ನಾಗರಾಜ್, ಕೆ.ರಾಘವೇಂದ್ರ ನಾಯರಿ ಉಪಸ್ಥಿತರಿದ್ದರು.

## ರೌಡಿಶೀಟರ್‌ಗಳ ವಿರುದ್ಧ ದೂರು ನೀಡಲು ಹಿಂಜರಿಯಬೇಡಿ : ಎಸ್ಪಿ

ದಾವಣಗೆರೆ, ಆ.26- ಜಾಮೀನಿನ ಮೇಲೆ ಹೊರಗಿರುವ ಕೆಲವರು ಈಗಲೂ ರಾಜೀ ಪಂಚಾಯಿತಿ, ಭೂ ವ್ಯಾಜ್ಯ ಇತ್ಯರ್ಥ, ಬಡ್ಡಿ ವ್ಯವಹಾರ, ಹಣ ಸುಲಿಗೆಯಂತಹ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಬಗ್ಗೆ ಮಾಹಿತಿ ಇದೆ. ಅಂತಹವರ ವಿರುದ್ಧ ದೂರು ಕೊಡಲು ಜನರು ಹಿಂಜರಿಯಬಾರದು. ದೂರು ನೀಡಿದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಿಳಿಸಿದರು.

ನಗರದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆದ ರೌಡಿಶೀಟರ್‌ಗಳ ಪರೇಡ್ ನಂತರ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರೌಡಿಶೀಟ್‌ನಲ್ಲಿರುವ ಕೆಲವರು ಈಗಲೂ ವಿವಿಧ ಕಾನೂನು ಬಾಹಿರ ಚಟುವಟಿಕೆಗಳನ್ನು ಮಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿವೆ. ಆದರೆ, ಇವರ ಬಗ್ಗೆ ದೂರು ನೀಡಲು ಸಮಾಜದಲ್ಲಿ ಕೆಲವರು ಹೆದರುತ್ತಿದ್ದಾರೆ. ಈ ಬಗ್ಗೆ ದೂರುಗಳು ಬಂದರೆ ಸುಮ್ಮನಿರಲ್ಲ. ಸಾರ್ವಜನಿಕರು ಭಯ ಪಡದೇ ದೂರು ನೀಡಬೇಕು. ಇಂತಹ ಯಾವುದೇ ವ್ಯಕ್ತಿಗಳಿಗೆ ಹೆದರುವ ಅವಶ್ಯಕತೆ ಇಲ್ಲ ಎಂದರು.

ಈಗಲೂ ಕೆಲವರು ಅಕ್ರಮ ಚಟುವಟಿಕೆ ನಡೆಸುವವರ ಮೇಲೆ ನಿಗಾ ಇಡಲಾಗುವುದು. ಅಲ್ಲದೇ ಅವರು ಯಾವ್ಯಾವ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಕಲೆ ಹಾಕಲಾಗುವುದು. ಸಕ್ರಿಯವಾಗಿದ್ದರೆ ಮತ್ತೆ ಅಂತವರನ್ನು ಜೈಲಿಗೆ ಕಳಿಸಲಾಗುವುದು ಎಂದು ಮುನ್ನೆಚ್ಚರಿಸಿದರು.

ಮಿಸ್ ಫೈರ್‌ನಿಂದ ಸಾವಿಗೀಡಾದ ಚೇತನ್ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಪ್ರಗತಿಯಲ್ಲಿದೆ. ಬೆಂಗಳೂರಿನಿಂದ ಆಗಮಿಸಿದ್ದ ತಜ್ಞರ ತಂಡ ಪರಿಶೀಲನೆ ನಡೆಸಿ ಅಗತ್ಯ ಮಾಹಿತಿ ಸಂಗ್ರಹಿಸಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಆರೋಗ್ಯ ನಿರೀಕ್ಷಣಾಧಿಕಾರಿಗಳ ಸಂಘಕ್ಕೆ ಆಯ್ಕೆ

ದಾವಣಗೆರೆ, ಆ.26- ರಾಜ್ಯ ಆರೋಗ್ಯ ನಿರೀಕ್ಷಣಾಧಿಕಾರಿಗಳ ಸಂಘದ ದಾವಣಗೆರೆ ತಾಲ್ಲೂಕು ಶಾಖೆಯ ಅಧ್ಯಕ್ಷರಾಗಿ ಸಿ.ಕೆ. ರಾಜಪ್ಪ, ಕಾರ್ಯಾಧ್ಯಕ್ಷರಾಗಿ ಜಿ.ಎಸ್. ರವಿಕುಮಾರ್, ಗೌರವಾಧ್ಯಕ್ಷರಾಗಿ ಎಂ. ಆಂಜನೇಯ, ಟಿ.ಎಸ್. ವೆಂಕಟಾಚಲ, ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಎಸ್. ರಾಜೇಶ್, ಖಜಾಂಚಿಯಾಗಿ ಹೆಚ್.ಜೆ. ಮಂಜುನಾಥ್ ಆಯ್ಕೆಯಾಗಿದ್ದಾರೆ.

## 38 ಕೋಟಿ ಕಾರ್ಮಿಕರ ಮಾಹಿತಿ ಇ-ಶ್ರಮ ಪೋರ್ಟಲ್‌ಗೆ ಚಾಲನೆ

ನವದೆಹಲಿ, ಆ. 26 – ಅಸಂಘಟಿತ ವಲಯದ 38 ಕೋಟಿ ಕಾರ್ಮಿಕರ ಮಾಹಿತಿ ಸಂಗ್ರಹಿಸುವ ಇ-ಶ್ರಮ ಪೋರ್ಟಲ್‌ಗೆ ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ಚಾಲನೆ ನೀಡಿದ್ದಾರೆ. ಕಟ್ಟಡ ನಿರ್ಮಾಣ, ವಲಸೆ ಕಾರ್ಮಿಕರು, ಬೀದಿ ವ್ಯಾಪಾರಿಗಳು ಹಾಗೂ ಮನೆ ಕೆಲಸದವರು ಸೇರಿದಂತೆ ಹಲವಾರು ವರ್ಗದ ಅಸಂಘಟಿತ ವಲಯದ ಕಾರ್ಮಿಕರನ್ನು ಗುರುತಿಸಲು ಸರ್ಕಾರ ಉದ್ದೇಶಿಸಿದೆ.

ಇ-ಶ್ರಮ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವ ಪ್ರತಿಯೊಬ್ಬ ಅಸಂಘಟಿತ ವಲಯದ ಕಾರ್ಮಿಕನಿಗೆ 2 ಲಕ್ಷ ರೂ.ಗಳ ಅಪಘಾತ ವಿಮೆ ನೀಡಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಂಜೂರಾತಿ ನೀಡಿದ್ದಾರೆ ಎಂದವರು ತಿಳಿಸಿದ್ದಾರೆ.

ನೋಂದಾಯಿಸಿಕೊಂಡವರು ಸಾವನ್ನಪ್ಪಿದಾಗ ಇಲ್ಲವೇ ಶಾಶ್ವತ ಇಲ್ಲವೇ ಭಾಗಶಃ ಅಂಗಹೀನತೆಗೆ ಒಳಗಾದಾಗ ಪರಿಹಾರ ನೀಡಲಾಗುವುದು ಎಂದವರು ಹೇಳಿದ್ದಾರೆ.

## 31ರಂದು ನಗರಕ್ಕೆ ಕ್ರೀಡಾ ಸಚಿವ ಡಾ. ನಾರಾಯಣಗೌಡ

ದಾವಣಗೆರೆ, ಆ. 26- ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ.ನಾರಾಯಣಗೌಡ ಅವರು ಇದೇ ದಿನಾಂಕ 31 ರ ಮಂಗಳವಾರ ನಗರಕ್ಕೆ ಆಗಮಿಸಲಿದ್ದಾರೆ.

ಅಂದು ಮಧ್ಯಾಹ್ನ 3.15 ಕ್ಕೆ ನಗರಕ್ಕೆ ಆಗಮಿಸುವ ಸಚಿವರು, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಏರ್ಪಡಿಸಿರುವ ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ರೇಷ್ಮೆ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು. ಸಂಜೆ 5 ಗಂಟೆಗೆ ಜಿಲ್ಲಾ ಕ್ರೀಡಾಂಗಣಕ್ಕೆ ಮತ್ತು ಕ್ರೀಡಾ ವಸತಿ ನಿಲಯಕ್ಕೆ ಭೇಟಿ ನೀಡುವರು. ಸಂಜೆ 6 ಕ್ಕೆ ಪಕ್ಷದ ಜಿಲ್ಲಾ ಕಚೇರಿಗೆ ಭೇಟಿ ನೀಡಿ ಕಾರ್ಯಕರ್ತರು, ಸಾರ್ವಜನಿಕರ ಕುಂದು-ಕೊರತೆ ಆಲಿಸುವರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte